# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಆಗಸ್ಟ್ 25, 2022

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ಸಂಪುಟ : 49 ಸಂಚಿಕೆ : 103 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಆರೋಗ್ಯ, ಅಧ್ಯಾತ್ಮ ಭಾರತದ ಜೊತೆ ನಿಕಟವಾಗಿ ಬೆಸೆದುಕೊಂಡಿವೆ



**ಮಾತಾ ಅಮೃತಾನಂದಮಯಿ ಮಠದ ಆಶ್ರಯದ ಆಸ್ಪತ್ರೆ ಉದ್ಘಾಟಿಸಿದ ಪ್ರಧಾನಿ ಮೋದಿ**

ಫರೀದಾಬಾದ್, ಆ. 24 – ಆರೋಗ್ಯ ಹಾಗೂ ಅಧ್ಯಾತ್ಮಗಳು ಭಾರತದ ಜೊತೆ ನಿಕಟವಾಗಿ ಬೆಸೆದುಕೊಂಡಿವೆ ಎಂದಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಅಧ್ಯಾತ್ಮ – ಖಾಸಗಿ ಸಹಭಾಗಿತ್ವ ಯಶಸ್ಸು ಕಂಡಿರುವುದಕ್ಕೆ ಕೊರೊನಾದ ಲಸಿಕಾ ಅಭಿಯಾನದ ಯಶಸ್ಸು ಉದಾಹರಣೆ ಎಂದಿದ್ದಾರೆ.

ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ 2,600 ಬೆಡ್‌ಗಳ ಅಮೃತ ಖಾಸಗಿ ಆಸ್ಪತ್ರೆಯ ಉದ್ಘಾಟನೆ ನೆರವೇರಿಸಿ ಅವರು ಮಾತನಾಡುತ್ತಿದ್ದರು. 130 ಎಕರೆ ಪ್ರದೇಶದ ಕ್ಯಾಂಪಸ್‌ನಲ್ಲಿ ಆಸ್ಪತ್ರೆ ನಿರ್ಮಾಣವಾಗಿದೆ. ಮಾತಾ ಅಮೃತಾನಂದಮಯಿ ಮಠದ ಆಶ್ರಯದಲ್ಲಿ ಆಸ್ಪತ್ರೆ ನಿರ್ಮಾಣವಾಗಿದೆ.

ಲಸಿಕಾ ಅಭಿಯಾನದ ವೇಳೆ ಕೆಲವರು ಅಪಪ್ರಚಾರ ಮಾಡಲು ಮುಂದಾಗಿದ್ದರು. ಆಗ ನಮ್ಮ ಅಧ್ಯಾತ್ಮಿಕ ನಾಯಕರು ಅದನ್ನು ತಡೆಯಲು ನೆರವಾದರು. ನಂತರ ಜನರು ಲಸಿಕೆ ಪಡೆಯಲು ಮುಂದಾದರು ಎಂದು ಪ್ರಧಾನಿ ತಿಳಿಸಿದ್ದಾರೆ.

ತಂತ್ರಜ್ಞಾನ ಹಾಗೂ ಆಧುನೀಕರಣದಿಂದ ದೇಶ ಆರೋಗ್ಯ ವಲಯದಲ್ಲಿ ಪ್ರಗತಿ ಕಾಣುತ್ತಿದೆ. ಆರೋಗ್ಯ ಹಾಗೂ ಶಿಕ್ಷಣ ವಲಯವನ್ನು ಸಮರೋಪಾದಿಯಲ್ಲಿ ರೂಪಾಂತರಿಸಲು ಸರ್ಕಾರಗಳು ಹಾಗೂ ಇತರರು ಜೊತೆಯಾಗುತ್ತಿದ್ದಾರೆ ಎಂದವರು ಹೇಳಿದ್ದಾರೆ.

ಪ್ರಧಾನಿ ವೇದಿಕೆಗೆ ಬಂದಾಗ ಮಾತಾ ಅಮೃತಾನಂದಮಯಿ ಅವರು ಪುಷ್ಪ ವೃಷ್ಟಿಯಿಂದ ಸ್ವಾಗತಿಸಿದರು. ಪ್ರಧಾನಿ ಮೋದಿ ಅವರು ಅಮೃತಾನಂದಮಯಿ ಅವರಿಗೆ ಶಾಲೊಂದನ್ನು ನೀಡಿದರು.

ನೂತನ ಸೂಪರ್ (2ನೇ ಪುಟಕ್ಕೆ)

# ಬೊಮ್ಮಾಯಿ ಸರ್ಕಾರದಲ್ಲಿ 50% ಕಮೀಷನ್

## ಆಮೆ ವೇಗದಲ್ಲಿದ್ದ ಭ್ರಷ್ಟಾಚಾರ, ಈಗ ಶರವೇಗದಲ್ಲಿದೆ : ಸಿದ್ದರಾಮಯ್ಯ ಆರೋಪ



ಬೆಂಗಳೂರು, ಆ. 24 - ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ 40% ಅಲ್ಲ 50% ರಷ್ಟು ಕಮೀಷನ್ ತೆಗೆದುಕೊಳ್ಳುತ್ತಿದೆ ಎಂದು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ರಾಜ್ಯ ಸರ್ಕಾರ ಕಮೀಷನ್‌ನಲ್ಲಿ ತೊಡಗಿದೆ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಯ್ಯ ಅವರು ಸಿದ್ದರಾಮಯ್ಯ ಅವರಿಗೆ ದೂರು ನೀಡಿ ದ್ದರು. ಗುತ್ತಿಗೆದಾರರನ್ನು ಭೇಟಿ ಮಾಡಿದ ನಂತರ ಸಿದ್ದರಾಮಯ್ಯ ಈ ಆರೋಪ ಮಾಡಿದ್ದಾರೆ.

ಆ ಮೂಲಕ ಪರ್ಸೆಂಟೇಜ್ ಆರೋಪದ ದೂಳು ಮತ್ತೊಮ್ಮೆ ಸರ್ಕಾರದ ವಿರುದ್ಧ ಕವಿದಿದ್ದು ಮುಂದಿನ ದಿನಗಳಲ್ಲಿ ಮತ್ತಷ್ಟು ತಾರಕಕ್ಕೇರುವ ಲಕ್ಷಣಗಳಿವೆ.

ಈ ವಿಚಾರವನ್ನು ತಾವು ವಿಧಾನಸಭೆಯಲ್ಲಿ ಒತ್ತಾಯ ಮಾಡಬೇಕು ಎಂದು ಗುತ್ತಿಗೆದಾರರು ನನಗೆ ಮನವಿ ಮಾಡಿದ್ದಾರೆ. ಟೆಂಡರ್ ಅನುಮೋದನೆಗೆ ಮೊದಲೇ 30 ರಿಂದ 40% ಲಂಚ ಕೊಡಬೇಕಾಗಿದೆ. ಪ್ರಧಾನಿಗಳಿಗೆ ಪತ್ರ ಬರೆದು ಒಂದು ವರ್ಷವಾದರೂ ಅವರು ಯಾವ ಕ್ರಮವನ್ನು ಕೈಗೊಂಡಿಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ನಾವು ನ್ಯಾಯಾಂಗ ತನಿಖೆ ನಡೆಸುವು ದಾದರೆ ದಾಖಲಾತಿ ಕೊಡಲು ತಯಾರಾಗಿದ್ದೇವೆ, ಒಂದು ವೇಳೆ ನಮ್ಮಿಂದ ಇದನ್ನು ಸಾಬೀತು ಮಾಡಲು ಆಗದೆ ಹೋದರೆ, ಯಾವುದೇ ರೀತಿಯ ಕಾನೂನು ಕ್ರಮ ಎದುರಿಸಲು ಸಿದ್ಧರಿದ್ದೇವೆ ಎಂದು ಗುತ್ತಿಗೆದಾರರು ಹೇಳಿದ್ದಾರೆ.

ನಾನು ಕೂಡ ಹೈಕೋರ್ಟ್‌ನ ಹಾಲಿ ನ್ಯಾಯಾಧೀಶರ ಉಸ್ತುವಾರಿಯಲ್ಲಿ ನ್ಯಾಯಾಂಗ ತನಿಖೆ ಮಾಡಿ ಎಂದು ಒತ್ತಾಯ ಮಾಡಿದ್ದೆ. ಸರ್ಕಾರ ಇದಕ್ಕೆ ಒಪ್ಪುತ್ತಿಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಭ್ರಷ್ಟಾಚಾರ ಎಲ್ಲಾ ಕಾಲದಲ್ಲೂ ಆಮೆ ವೇಗದಲ್ಲಿ ಇತ್ತು, ಈಗ ಶರವೇಗದಲ್ಲಿ ನಡೆಯುತ್ತಿದೆ ಎಂದು ಗುತ್ತಿಗೆದಾರರ ಸಂಘದವರು ಹೇಳಿದ್ದಾರೆ. ಗುತ್ತಿಗೆದಾರರಿಗೆ ಜಲ ಸಂಪನ್ಮೂಲ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಹಾಗೂ ಬಿಬಿಎಂಪಿಯಿಂದ ಸುಮಾರು (2ನೇ ಪುಟಕ್ಕೆ)

### ಕಮೀಷನ್ ಸಾಕ್ಷಿ ಕೊಡಿ, ಶಿಕ್ಷೆ ಖಚಿತ

#### ಉದ್ದೇಶಪೂರಿತ ಆರೋಪಕ್ಕೆ ಬೆಲೆ ಇಲ್ಲ : ಬೊಮ್ಮಾಯಿ



ಬೆಂಗಳೂರು, ಆ. 24 - ಸಚಿವರು, ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರದ ಬಗ್ಗೆ ಪುರಾವೆ, ದಾಖಲೆಗಳಿದ್ದರೆ ಲೋಕಾಯುಕ್ತಕ್ಕೆ ದೂರು ನೀಡಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, 40% ಕಮೀಷನ್ ಆರೋಪಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಿ, ಹೇಳಿಕೆ ನೀಡಿದ ನಂತರ ಇದಕ್ಕೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿಯವರು ಶಾಸನಬದ್ಧ ತನಿಖಾ ಸಂಸ್ಥೆಗೆ ಯಾವುದೇ ಆರೋಪಗಳಿದ್ದರೂ ದೂರು ನೀಡಬಹುದು ಎಂದಿದ್ದಾರೆ. ಹೈಕೋರ್ಟ್ ಆದೇಶದ ನಂತರ ಲೋಕಾಯುಕ್ತ ಸಂಸ್ಥೆಗೆ ಪೂರ್ಣ ಅಧಿಕಾರ ನೀಡಲಾಗಿದೆ. ಅದೊಂದು ಸ್ವಾಯತ್ತ ಸಂಸ್ಥೆ. ಇದರಲ್ಲಿ ಯಾರೂ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ಪುರಾವೆಗಳಿದ್ದರೆ ದೂರು ನೀಡಿ, ತಪ್ಪಿತಸ್ಥರಾಗಿದ್ದರೆ ಅಂತಹವರಿಗೆ ಶಿಕ್ಷೆ ಖಚಿತ ಎಂದರು.

ಕೆಂಪಣ್ಣ ಅವರ ಬಗ್ಗೆ ಕಿಡಿಕಾರಿದ ಮುಖ್ಯಮಂತ್ರಿಗಳು, ಗುತ್ತಿಗೆದಾರರ ಒಂದು ಸಂಘದ ಅಧ್ಯಕ್ಷರು, ಇಂತಹ ಹಲವು ಸಂಘಗಳಿವೆ. ಅವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ನಂತರ ನೀಡಿರುವ ಹೇಳಿಕೆಗೆ ನಾವು ಏನು ಅನ್ನುವುದು? ಎಂದು ಪ್ರಶ್ನಿಸಿದ್ದಾರೆ.

ಅವರು ಈಗಾಗಲೇ ನಮ್ಮನ್ನು ಭೇಟಿ ಮಾಡಿ, ಪರ್ಸೆಂಟೇಜ್ (2ನೇ ಪುಟಕ್ಕೆ)

## ಲೈನ್‌ಮ್ಯಾನ್‌ಗೆ ಹೆಲ್ಮೆಟ್ ದಂಡ ಪೊಲೀಸ್ ಠಾಣೆಯ ವಿದ್ಯುತ್ ಕಡಿತ

ಲಖ್ನೌ, ಆ. 24 – ಹೆಲ್ಮೆಟ್ ಧರಿಸದ ಕಾರಣಕ್ಕೆ ಪೊಲೀಸರು ದಂಡ ವಿಧಿಸಿದರು ಎಂದು ಆಕ್ರೋಶಗೊಂಡ ಲೈನ್‌ಮ್ಯಾನ್ ಒಬ್ಬರು, ವಿದ್ಯುತ್ ಬಾಕಿ ಉಳಿಸಿಕೊಂಡ ಪೊಲೀಸ್ ಠಾಣೆಯ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ ಘಟನೆ ಉತ್ತರ ಪ್ರದೇಶದ ಶಾಮ್ಲಿ ಎಂಬಲ್ಲಿ ನಡೆದಿದೆ. ಮೆಹತಾಬ್ ಎಂಬ ಹಂಗಾಮಿ ನೌಕರನಿಗೆ ಪೊಲೀಸರು ಹೆಲ್ಮೆಟ್ ಧರಿಸದ ಕಾರಣಕ್ಕಾಗಿ 6 ಸಾವಿರ ರೂ.ಗಳ ದಂಡ ವಿಧಿಸಿದ್ದರು. ಅವರ ಮಾಸಿಕ ವೇತನವೇ 5 ಸಾವಿರ ರೂ.ಗಳಾಗಿದೆ.

ಉತ್ತರ ಪ್ರದೇಶದಲ್ಲಿ ಹೆಲ್ಮೆಟ್ ಧರಿಸದೇ ಇರುವುದಕ್ಕೆ 2 ಸಾವಿರ ರೂ.ಗಳ ದಂಡವಿದೆ. ಹೀಗಾಗಿ 6 ಸಾವಿರ ರೂ.ಗಳ ದಂಡ ಏಕೆ ವಿಧಿಸಲಾಗಿದೆ ಎಂಬುದು ಸ್ಪಷ್ಟವಾಗಿಲ್ಲ.

ಇನ್ನೊಮ್ಮೆ ಈ ತಪ್ಪು ಮಾಡುವುದಿಲ್ಲ ಎಂದು ಪೊಲೀಸರಲ್ಲಿ ಪದೇ ಪದೇ ಮನವಿ ಮಾಡಿಕೊಂಡೆ, ಆದರೂ ದಂಡ ವಿಧಿಸಲಾಗಿದೆ. ಇದೇ ವೇಳೆ ಉಳಿದ ಕೆಲವರು ಹೆಲ್ಮೆಟ್ ಧರಿಸದಿದ್ದರೂ ಅವರನ್ನು ಸುಮ್ಮನೆ ಬಿಡಲಾಯಿತು ಎಂದು ಮೆಹತಾಬ್ ಆರೋಪಿಸಿದ್ದಾರೆ. ಠಾಣಾ ಭವನ್ ಪೊಲೀಸ್ ಠಾಣೆಯು ಸಾವಿರಾರು ರೂ.ಗಳ ವಿದ್ಯುತ್ ಶುಲ್ಕ ಬಾಕಿ ಉಳಿಸಿಕೊಂಡಿದೆ ಎಂದು ವಿದ್ಯುತ್ ಇಲಾಖೆ ತಿಳಿಸಿದೆ. ಈ ಬಗ್ಗೆ ಪೊಲೀಸರು ಯಾವುದೇ ಹೇಳಿಕೆ ನೀಡಿಲ್ಲ.

## ಆಯುಷ್ಮಾನ್ ಕಾರ್ಡುಗಳ ಹೆಸರು ಬದಲಾವಣೆ

**ರಾಜ್ಯಗಳ ಯೋಜನೆಗಳು ಸೇರ್ಪಡೆ**

ನವದೆಹಲಿ, ಆ. 24 – ಕೇಂದ್ರ ಆರೋಗ್ಯ ಸಚಿವಾಲಯದ ಆಯುಷ್ಮಾನ್ ಕಾರ್ಡ್ ಹೆಸರು ಬದಲಿಸಿ, ಅವುಗಳಲ್ಲಿ ರಾಜ್ಯಗಳ ಯೋಜನೆಗಳ ಹೆಸರುಗಳನ್ನೂ ಸೇರಿಸಲು ಕೇಂದ್ರ ಆರೋಗ್ಯ ಸಚಿವಾಲಯ ನಿರ್ಧರಿಸಿದೆ.

ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (ಎಬಿ ಪಿಎಂ-ಜೆಎವೈ) ಹೆಸರಿನಲ್ಲಿ ನೀಡಲಾಗುತ್ತಿದ್ದ ಕಾರ್ಡುಗಳನ್ನು ಇನ್ನು ಮುಂದೆ 'ಆಯುಷ್ಮಾನ್ ಕಾರ್ಡ್' ಎಂದು ನೀಡಲಾಗುವುದು.

ಇವುಗಳಲ್ಲಿ ರಾಜ್ಯಗಳ ನಿರ್ದಿಷ್ಟ ಯೋಜನೆಗಳನ್ನೂ ಸೇರ್ಪಡೆ ಮಾಡಲಾಗುವುದು. ಕೇಂದ್ರ ಹಾಗೂ ರಾಜ್ಯಗಳ ಯೋಜನೆಗಳ ಬಗ್ಗೆ ಸಮಾನ ಸ್ಥಳದಲ್ಲಿ ಮಾಹಿತಿ ನೀಡಲಾಗುವುದು. ಇಂಗ್ಲಿಷ್ ಹಾಗೂ ಸ್ಥಳೀಯ ಭಾಷೆಗಳಲ್ಲಿ ಈ ಕಾರ್ಡುಗಳು ಇರಲಿವೆ.

ಪಶ್ಚಿಮ ಬಂಗಾಳ ಹಾಗೂ ಒಡಿಶಾ ಹೊರತು ಪಡಿಸಿ ಉಳಿದ ಎಲ್ಲಾ ರಾಜ್ಯಗಳು ಆಯುಷ್ಮಾನ್ ಕಾರ್ಡುಗಳ ಹೆಸರು ಬದಲಿಸಲು ಸಮ್ಮತಿಸಿವೆ.

## ಧ್ವನಿ, ವಿಡಿಯೋ ಸಾಕ್ಷಿಯ ಮಸೂದೆಗೆ ಅಂಗೀಕಾರ

ನವದೆಹಲಿ, ಆ. 24 – ಅಪರಾಧಿಕ ಪ್ರಕರಣಗಳಲ್ಲಿ ಧ್ವನಿ ಹಾಗೂ ವಿಡಿಯೋ ಸಾಕ್ಷಿಗೆ ಅವಕಾಶ ನೀಡಲು ಸಿ.ಆರ್.ಪಿ.ಸಿ.ಗೆ ತಿದ್ದುಪಡಿ ತರುವ ಕರ್ನಾಟಕದ ಮಸೂದೆಗೆ ರಾಷ್ಟ್ರಪತಿ ಅಂಗೀಕಾರ ನೀಡಿದ್ದಾರೆ. ಸಿ.ಆರ್.ಪಿ.ಸಿ. (ಕರ್ನಾಟಕ ತಿದ್ದುಪಡಿ) ಮಸೂದೆ 2021ರ ಮೂಲಕ ಧ್ವನಿ ಹಾಗೂ ವಿಡಿಯೋ ಸಾಕ್ಷಿಗಳನ್ನು ಆರೋಪಿ ಮತ್ತು ವಕೀಲರ ಉಪಸ್ಥಿತಿಯಲ್ಲಿ ದಾಖಲಿಸಿಕೊಳ್ಳಬಹುದಾಗಿದೆ.

# ಗಣೇಶೋತ್ಸವಕ್ಕೆ ಅನುಮತಿ ಕಡ್ಡಾಯ

## ಸಾರ್ವಜನಿಕ ಗಣೇಶೋತ್ಸವ ಸಮಿತಿಗೆ ನಿಯಮ ಪಾಲನೆ ಜವಾಬ್ದಾರಿ

ದಾವಣಗೆರೆ, ಆ.24 – ಗಣೇಶೋತ್ಸವ ಆಚರಿಸುವ ಸಂಘ-ಸಂಸ್ಥೆಗಳು ಸರ್ಕಾರದ ಸುತ್ತೋಲೆಯ ಅಂಶಗಳನ್ನು ಪಾಲಿಸಬೇಕು. ಸಾರ್ವಜನಿಕ ಸುರಕ್ಷತೆಯೊಂದಿಗೆ ಹಾಗೂ ಪರಿಸರ ಮಾಲಿನ್ಯ ಉಂಟಾಗದ ರೀತಿಯಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪೊಲೀಸ್ ಇಲಾಖೆ ಸಂಯುಕ್ತಾಶ್ರಯದಲ್ಲಿ ಗೌರಿ ಗಣೇಶ ಚತುರ್ಥಿ ಪ್ರಯುಕ್ತ ಆಯೋಜಿಸಲಾಗಿದ್ದ 'ನಾಗರಿಕ ಸೌಹಾರ್ದ ಸಮನ್ವಯ ಸಭೆ'ಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಹಾನಗರ ಪಾಲಿಕೆ ವತಿಯಿಂದ ಮೂರು ಕಡೆ ಏಕಗವಾಕ್ಷಿಯಡಿ ಗಣೇಶ ಪ್ರತಿಷ್ಠಾಪನೆಗೆ ಅನುಮತಿ ನೀಡಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ ರಿಷ್ಯಂತ್ ಮಾತನಾಡಿ, ಪರವಾನಿಗೆ ಪಡೆಯದೇ ಗಣೇಶ ಪ್ರತಿಷ್ಠಾಪಿಸಲು ಅವಕಾಶ ಇಲ್ಲ. ಸರ್ಕಾರದ ಎಲ್ಲ (2ನೇ ಪುಟಕ್ಕೆ)



### ಧ್ವನಿವರ್ಧಕಗಳಿಗೆ ಸುಪ್ರೀಂ ಮಾರ್ಗಸೂಚಿ ಕಡ್ಡಾಯ

**ಗಣೇಶೋತ್ಸವದ ವೇಳೆ ಧ್ವನಿವರ್ಧಕಗಳನ್ನು ಅಳವಡಿಸುವವರು ಸುಪ್ರೀಂ ಕೋರ್ಟ್ ಮಾರ್ಗಸೂಚಿ ಪಾಲಿಸುವುದು ಕಡ್ಡಾಯವಾಗಿದೆ ಎಂದು ಎಸ್ಪಿ ರಿಷ್ಯಂತ್ ತಿಳಿಸಿದ್ದಾರೆ. ಸುಪ್ರೀಂ ಕೋರ್ಟ್ ಆದೇಶಕ್ಕೆ ಎಲ್ಲರೂ ಬದ್ಧರಾಗಿರಬೇಕು. ಅದನ್ನು ಮೀರಿ ಅನುಮತಿ ಕೊಡಲು ಸಾಧ್ಯವಿಲ್ಲ. ಒಂದು ವೇಳೆ ನಿಯಮ ಮೀರಿ ಡಿ.ಜೆ. ಬಳಸಿದರೆ, ಪ್ರಕರಣ ದಾಖಲಿಸಿದ ಸಂದರ್ಭದಲ್ಲಿ ಡಿ.ಜೆ.ಗಳನ್ನು ವಶಪಡಿಸಿಕೊಳ್ಳಲಾಗುವುದು. ಆಗ ಹೆಚ್ಚಿನ ತೊಂದರೆಗೆ ಒಳಗಾಗುವುದು ಡಿ.ಜೆ. ಪೂರೈಸುವವರೇ ಎಂದೂ ರಿಷ್ಯಂತ್ ಹೇಳಿದ್ದಾರೆ. ಧ್ವನಿವರ್ಧಕಗಳ ಬಳಕೆಯ ಬಗ್ಗೆ ಧಾರ್ಮಿಕ ಸಂಸ್ಥೆಗಳು, ರೆಸ್ಟೋರೆಂಟ್, ಹೋಟೆಲ್ ಸೇರಿದಂತೆ 597 ಬಳಕೆದಾರರಿಗೆ ನೋಟಿಸ್ ಕಳಿಸಿದ್ದೇವೆ. ಇವರ ಪೈಕಿ 252 ಜನರು ಅನುಮತಿ ಪಡೆದಿದ್ದಾರೆ. ಅನುಮತಿ ಪಡೆದ ನಂತರವೂ ನಿಯಮ ಉಲ್ಲಂಘಿಸಿದ ಕಾರಣಕ್ಕಾಗಿ 24 ಜನರಿಗೆ ನೋಟಿಸ್ ಕಳಿಸಲಾಗಿದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ.**

## ಮಹಾನಗರ ಪಾಲಿಕೆ ಮೇಯರ್-ಉಪಮೇಯರ್ ಮೀಸಲಾತಿ ಪ್ರಕಟ

ದಾವಣಗೆರೆ, ಆ. 24- ರಾಜ್ಯ ಸರ್ಕಾರವು 10 ಮಹಾನಗರ ಪಾಲಿಕೆಗಳ ಮೇಯರ್ ಹಾಗೂ ಉಪಮೇಯರ್ ಸ್ಥಾನಗಳಿಗೆ ಮೀಸಲಾತಿ ಪ್ರಕಟಿಸಿ ಬುಧವಾರ ಅಧಿಸೂಚನೆ ಹೊರಡಿಸಿದೆ.

ದಾವಣಗೆರೆ ಮಹಾನಗರ ಪಾಲಿಕೆ ಮೇಯರ್ ಸಾಮಾನ್ಯ ಮಹಿಳೆ, ಉಪ ಮೇಯರ್ ಹಿಂದುಳಿದ ವರ್ಗ ಎ (ಮಹಿಳೆ). ಈಗಿರುವ ಮೇಯರ್ ಜಯಮ್ಮ ಗೋಪಿನಾಯ್ಕ, ಉಪಮೇಯರ್ ಗಾಯತ್ರಿ ಬಾಯಿ ಅವರ ಅಧಿಕಾರದ ಅವಧಿ ಫೆಬ್ರವರಿಯವರೆಗೆ ಇದೆ.

## ಯುಪಿಎಸ್‌ಸಿ: ಹಲವು ಪರೀಕ್ಷೆಗೆ ಒಂದೇ ಬಾರಿ ವಿವರ ಸಲ್ಲಿಕೆ ಪದ್ಧತಿ ಜಾರಿ

ನವದೆಹಲಿ, ಆ. 24 – ಸರ್ಕಾರಿ ಉದ್ಯೋಗ ಆಕಾಂಕ್ಷಿಗಳು ಪದೇ ಪದೇ ಸ್ವ ವಿವರಗಳನ್ನು ದಾಖಲಿಸುವುದನ್ನು ತಪ್ಪಿಸಲು ಕೇಂದ್ರ ಲೋಕಸೇವಾ ಆಯೋಗ ಮುಂದಾಗಿದೆ. ಆಕಾಂಕ್ಷಿಗಳು ವಿವಿಧ ಪರೀಕ್ಷೆಗಳಿಗಾಗಿ ಕೇವಲ ಒಂದೇ ಬಾರಿ ವಿವರಗಳನ್ನು ದಾಖಲಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ಒಂದು ಬಾರಿಯ ನೋಂದಣಿ (ಒ.ಟಿ.ಆರ್.) ವ್ಯವಸ್ಥೆಯಲ್ಲಿ ಉದ್ಯೋಗಾ (3ನೇ ಪುಟಕ್ಕೆ)

# ಅಶೋಕ ರಸ್ತೆ ರೈಲ್ವೆ ಕ್ರಾಸಿಂಗ್‌ನ ಮೊದಲ ಹಂತದ ಪರಿಹಾರ





ದಾವಣಗೆರೆ, ಆ. 24 – ಹಲವು ದಶಕಗಳ ಸಮಸ್ಯೆಯಾಗಿರುವ ಅಶೋಕ ರಸ್ತೆಯ ರೈಲ್ವೆ ಕ್ರಾಸಿಂಗ್ ಸಮಸ್ಯೆ ಬಗೆಹರಿಸುವ ಮೊದಲ ಹಂತದ ಕಾಮಗಾರಿ ಆರಂಭಗೊಂಡಿದೆ.

ರೈಲ್ವೆ ಕ್ರಾಸಿಂಗ್ ಸಮಸ್ಯೆ ಬಗೆಹರಿಸಲು ಎರಡು ಅಂಡರ್‌ಪಾಸ್‌ಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಪೈಕಿ ಲಿಂಗೇಶ್ವರ ದೇವಾಲಯದ ಎದುರಿನಿಂದ ಅಶೋಕ ಟಾಕೀಸ್ ಕಡೆಗೆ ಸಂಪರ್ಕಿಸುವ ಮೊದಲ ಅಂಡರ್‌ಪಾಸ್ ಕಾಮಗಾರಿ ಆರಂಭಗೊಂಡಿದೆ. ಬರುವ ಆ.28ರ ಭಾನುವಾರದಂದು ಅಂಡರ್‌ಪಾಸ್‌ಗೆ ಕಾಂಕ್ರೀಟ್ ಚೌಕಟ್ಟುಗಳನ್ನು ಅಳವಡಿಸಲಾಗುವುದು. ಈ ಕಾಮಗಾರಿಗಾಗಿ ಬೃಹತ್ ಕಾಂಕ್ರೀಟ್ ಚೌಕಟ್ಟುಗಳನ್ನು ಈಗಾಗಲೇ ತಂದಿರಿಸಲಾಗುತ್ತಿದೆ.

ಆಗಸ್ಟ್ 28ರಂದು ಬೆಳಿಗ್ಗೆ 6ರಿಂದ ಹತ್ತು ಗಂಟೆ ಅವಧಿಯಲ್ಲಿ ಈ ಕಾಂಕ್ರೀಟ್ ಚೌಕಟ್ಟುಗಳನ್ನು ಅಂಡರ್‌ಪಾಸ್‌ಗಳಿಗೆ ಅಳವಡಿಸಲಾಗುವುದು. ಈ ಅವಧಿಯಲ್ಲಿ ಹತ್ತಕ್ಕೂ ಹೆಚ್ಚು ರೈಲುಗಳ ಸಂಚಾರದಲ್ಲಿ ವ್ಯತ್ಯಯವಾಗಲಿದೆ. ಈ ಬಗ್ಗೆ ರೈಲ್ವೆ ಇಲಾಖೆ ಶೀಘ್ರದಲ್ಲೇ ಸೂಚನೆ ಪ್ರಕಟಿಸುವ ನಿರೀಕ್ಷೆ ಇದೆ.

### 7.2 ಕೋಟಿ ರೂ. ವೆಚ್ಚದಲ್ಲಿ ಸಣ್ಣ ವಾಹನಗಳ ಅಂಡರ್‌ಪಾಸ್

### ಆ.28ಕ್ಕೆ ಅಂಡರ್‌ಪಾಸ್‌ಗೆ ಕಾಂಕ್ರೀಟ್ ಚೌಕಟ್ಟು ಅಳವಡಿಕೆ

ನಂತರದಲ್ಲಿ ಈ ಅಂಡರ್‌ಪಾಸ್‌ಗೆ ಸಂಪರ್ಕಿಸುವ ರಸ್ತೆಗಳ ನಿರ್ಮಾಣ ಕಾಮಗಾರಿ ಆರಂಭವಾಗಲಿದೆ. ಒಳಚರಂಡಿ, ಕೇಬಲ್ ಸೇರಿದಂತೆ ಹಲವಾರು ವ್ಯವಸ್ಥೆಗಳನ್ನು ಸರಿಪಡಿಸಲು ಕನಿಷ್ಠ ಎರಡು ತಿಂಗಳು ಬೇಕಾಗಬಹುದು ಎಂದು ರೈಲ್ವೆ ಅಧಿಕಾರಿಗಳು ಅಂದಾಜಿಸಿದ್ದಾರೆ.

ಮೊದಲ ಹಂತದಲ್ಲಿ ನಿರ್ಮಿಸಲಾಗುತ್ತಿರುವ ಅಂಡರ್‌ಪಾಸ್ 10 ಅಡಿ ಎತ್ತರದ್ದಾಗಿರಲಿದೆ. ಕಾರು, ಬೈಕ್, ಟ್ರ್ಯಾಕ್ಟರ್ ಇತ್ಯಾದಿ ಸಣ್ಣ ವಾಹನಗಳು ಮಾತ್ರ ಈ ಅಂಡರ್‌ಪಾಸ್ ಬಳಸಲು ಸಾಧ್ಯವಾಗಲಿದೆ.

ಜಮೀನು ವಶ ಸೇರಿದಂತೆ ಈ ಅಂಡರ್‌ಪಾಸ್‌ಗೆ ಒಟ್ಟು 7.2 ಕೋಟಿ ರೂ. ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ.

ಮುಂದಿನ ಹಂತದಲ್ಲಿ ಬೃಹತ್ ವಾಹನಗಳಿಗೆ ಅವಕಾಶವಾಗುವ ರೀತಿಯಲ್ಲಿ ಎರಡನೇ ಅಂಡರ್‌ಪಾಸ್ ಅನ್ನು ಪದ್ಮಾಂಜಲಿ ಟಾಕೀಸ್ ಎದುರು ಅಳವಡಿಕೆ ಮಾಡಲಾಗುವುದು ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ.

### ಸಂಸದ ಸಿದ್ದೇಶ್ವರ ಪರಿಶೀಲನೆ

**ಅಶೋಕ ರಸ್ತೆಯ ರೈಲ್ವೆ ಕ್ರಾಸಿಂಗ್ ಸಮಸ್ಯೆ ಬಗೆಹರಿಸಲು ನಿರ್ಮಾಣವಾಗುತ್ತಿರುವ ಅಂಡರ್‌ಪಾಸ್ ಕಾಮಗಾರಿಯನ್ನು ಸಂಸದ ಜಿ.ಎಂ. ಸಿದ್ದೇಶ್ವರ ಅವರು ಬುಧವಾರ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಮಾನ್ಯ ರೈಲ್ವೆ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಮಂಜುನಾಥ್, ವೀರೇಶ್ ದೊಗ್ಗಳ್ಳಿ, ಅತಿಥ್ ಅಂಬರ್‌ಕರ್ ಹಾಜರಿದ್ದರು.**

## ಜಿಲ್ಲಾ ರೆಡ್ ಕ್ರಾಸ್ ಸಂಸ್ಥೆಗೆ ಗೌಡ್ರ ಚನ್ನಬಸಪ್ಪ ಛೇರ್ಮನ್



**ಪ್ರಧಾನ ಕಾರ್ಯದರ್ಶಿಯಾಗಿ ಆನಂದಜ್ಯೋತಿ, ಖಜಾಂಚಿಯಾಗಿ ಅನಿಲ್ ಬಾರೆಂಗಳ್**

ದಾವಣಗೆರೆ, ಆ.24- ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ದಾವಣಗೆರೆ ಜಿಲ್ಲಾ ಶಾಖೆಯ ಛೇರ್ಮನ್ ಆಗಿ ಸಾಮಾಜಿಕ ಸೇವಾ ಕಾರ್ಯಕರ್ತ ಗೌಡ್ರ ಚನ್ನಬಸಪ್ಪ ಅವರು ಆಯ್ಕೆಯಾಗಿದ್ದಾರೆ.

ಪ್ರಧಾನ ಕಾರ್ಯದರ್ಶಿಯಾಗಿ ಆನಂದ ಜ್ಯೋತಿ ಆಯ್ಕೆಯಾಗಿದ್ದು, ಸಂಸ್ಥೆಯ ಹಾಲಿ ಖಜಾಂಚಿ ಅನಿಲ್ ಬಾರೆಂಗಳ್ ಮತ್ತೊಂದು ಅವಧಿಗೆ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ.

ಸಂಸ್ಥೆಯ ಹಾಲಿ ಛೇರ್ಮನ್ ಆಗಿ ಸಂಸ್ಥೆ ಸಲ್ಲಿಸುತ್ತಿದ್ದ ಕಿವಿ-ಗಂಟಲು-ಮೂಗ ತಜ್ಞ ವೈದ್ಯ ಡಾ. ಎ.ಎಂ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಸ್ಥೆಯ ಸಭೆಯಲ್ಲಿ ಈ ಆಯ್ಕೆ ಅವಿರೋಧವಾಗಿ ನಡೆಯಿತು.

ವೈಸ್ ಛೇರ್ಮನ್ ಆಗಿ ಹಿರಿಯ ವೈದ್ಯ ಡಾ. ಮಹೇಶ್ ಕರಿಯಪ್ಪ, ರಾಜ್ಯ ಸಮಿತಿ ಸದಸ್ಯರಾಗಿ ಡಿ.ಎಸ್. ಸಿದ್ದಣ್ಣ, ನಿರ್ದೇಶಕರುಗಳಾಗಿ ಡಾ. ಎ.ಎಂ. ಶಿವಕುಮಾರ್, ಸಿಎ ಉಮೇಶ್ ಶೆಟ್ಟಿ, ಡಿ.ಎಸ್. ಸಾಗರ್, ಹೆಚ್. ಮಂಜುನಾಥ, ಡಾ. ಎ.ಎಂ. ಶಿಲ್ಪಾಶ್ರೀ, ಮಹಮ್ಮದ್ ಇನಾಯತ್‌ವುಲ್ಲಾ, ಎಸ್. (2ನೇ ಪುಟಕ್ಕೆ)

## ಮಹಾರಾಷ್ಟ್ರದಲ್ಲಿ ಶಾಸಕರ ಬಡಿದಾಟ

ಮುಂಬೈ, ಆ. 24 – ಮುಂಗಾರು ಅಧಿವೇಶನದ ಸಂದರ್ಭಧಲ್ಲಿ ಮಹಾರಾಷ್ಟ್ರ ವಿಧಾನಸಭೆ ಆವರಣದಲ್ಲಿ ಶಾಸಕರು ಹೊಡೆದಾಡಿಕೊಂಡ ಘಟನೆ ನಡೆದಿದೆ.

ಬೆಳಿಗ್ಗೆ 11.30ರ ಸಮಯದಲ್ಲಿ ಆಡಳಿತಾರೂಢ ಹಾಗೂ ಪ್ರತಿಪಕ್ಷಗಳ ಶಾಸಕರು ವಿಧಾನಭವನದ ಮೆಟ್ಟಿಲುಗಳ ಮೇಲಿದ್ದರು. ಆಗ ಶಾಸಕರು ಹಾಗೂ ಪರಿಷತ್ ಸದಸ್ಯರ ನಡುವೆ ಘರ್ಷಣೆ ನಡೆದಿದೆ.

ಮುಖ್ಯಮಂತ್ರಿ ಏಕನಾಥ ಶಿಂಧೆ ನೇತೃತ್ವದ ಶಿವಸೇನೆ ಬಣ ಹಾಗೂ ಮಿತ್ರಪಕ್ಷವಾದ ಬಿಜೆಪಿ ಶಾಸಕರು ವಿಧಾನ ಭವನದ ಮೆಟ್ಟಿಲುಗಳ ಮೇಲೆ ಕುಳಿತು, ಮುಂಬೈ ನಗರಪಾಲಿಕೆಯಲ್ಲಿ ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿದಂತೆ ಶಿವಸೇನೆ ಮುಖ್ಯಸ್ಥ ಉದ್ಧವ್ ಠಾಕ್ರೆ ಹಾಗೂ ಅವರ ಮಗ ಆದಿತ್ಯ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದರು.

ಅಲ್ಲಿಗೆ ಬಂದ ಪ್ರತಿಪಕ್ಷವಾದ ಎನ್.ಸಿ.ಪಿ. ಶಾಸಕರು, ಕ್ಯಾರೆಟ್‌ಗಳನ್ನು ಹಿಡಿದು ಘೋಷಣೆ ಕೂಗಿದರು. ಶಿಂಧೆ ಬಣದ ಶಾಸಕರು ಬಿಜೆಪಿ ಜೊತೆ ಕೈ ಜೋಡಿಸಿದ್ದಕ್ಕೆ ಅವರು ಈ ರೀತಿ ಪ್ರತಿಭಟಿಸಿದರು.

ಶಿಂಧೆ ಬಣದ ಕೆಲ ಶಾಸಕರು ಕ್ಯಾರೆಟ್‌ಗಳನ್ನು ಕಸಿಯುವ ಯತ್ನ ನಡೆಸಿದರು. ಆಗ ಉಭಯ ಬಣಗಳ ಶಾಸಕರು ಘರ್ಷಣೆ ನಡೆಸಿದ್ದಾರೆ.

## ರೆಡ್ ಕ್ರಾಸ್ ಸಂಸ್ಥೆಯ ಛೇರ್ಮನ್ ಆಗಿ ಗೌಡ್ರ ಚನ್ನಬಸಪ್ಪ





**(1ನೇ ಪುಟದಿಂದ)** ವಿ. ವಸಂತರಾಜ್, ಡಿ.ಎನ್. ಶಿವಾನಂದ, ಎ.ಜೆ. ರವಿಕುಮಾರ್, ಕೆ.ಕೆ. ನಾಗರಾಜ್, ಶ್ರೀಕಾಂತ್ ಬಗರೆ, ಎಂ.ಎಸ್. ನರೇಂದ್ರ ಪ್ರಕಾಶ್, ಪೃಥ್ವಿರಾಜ್ ಬದಾಮಿ, ಎಂ. ಕುಮಾರ್, ಡಾ. ಬಿ.ವಿ. ಧನಂಜಯ ಮೂರ್ತಿ, ಕೆ.ಬಿ. ಕರಿಬಸಪ್ಪ ಅವರುಗಳು ಆಯ್ಕೆಯಾಗಿದ್ದಾರೆ.

**ಸೇವಾ ಸ್ವೀಕಾರ :** ನೂತನ ಪದಾಧಿಕಾರಿಗಳ ಸೇವಾ ಸ್ವೀಕಾರ ಸಮಾರಂಭವು ಶ್ರೀ ಶಾಮನೂರು ಶಿವಶಂಕರಪ್ಪ ರೆಡ್ ಕ್ರಾಸ್ ಭವನದಲ್ಲಿ ಇಂದು ಸಂಜೆ ನಡೆಯಿತು.

ಸಂಸ್ಥೆಯ ಹಾಲಿ ಛೇರ್ಮನ್ ಡಾ. ಎ.ಎಂ. ಶಿವಕುಮಾರ್ ಅವರ ನೂತನ ಛೇರ್ಮನ್ ಗೌಡ್ರ ಚನ್ನಬಸಪ್ಪ ಅವರಿಗೆ, ಹಾಲಿ ಪ್ರಧಾನ ಕಾರ್ಯದರ್ಶಿ ಸಿಎ ಉಮೇಶ್ ಶೆಟ್ಟಿ ಅವರು ನೂತನ ಪ್ರಧಾನ ಕಾರ್ಯದರ್ಶಿ ಆನಂದ ಜ್ಯೋತಿ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ಸಂಸ್ಥೆಯ ಸಿಬ್ಬಂದಿಗಳಾದ ರವೀಂದ್ರನಾಥ್, ಶಿವಕುಮಾರ್, ವಿನಾಯಕ, ಜ್ಯೋತಿ, ಗಿರೀಶ್, ಶಿಲ್ಪಾ ರಾಣಿ, ಬೃಂದಾ, ಪೂಜಾ, ಉಮೇಶ್, ಪದ್ಮಬಾಯಿ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಮೊರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿ ಆತ್ಮಹತ್ಯೆ



**ಜಗಳೂರು**

ಜಗಳೂರು, ಆ.24- ತಾಲ್ಲೂಕಿನ ಮೆದಗಿನಕೆರೆ ವಸತಿ ಶಾಲೆಯ 6ನೇ ತರಗತಿ ವಿದ್ಯಾರ್ಥಿ ಎಸ್. ಸುನೀಲ್ (12) ಶೌಚಾಲಯದಲ್ಲಿ ನೇಣು ಬಿಗಿದುಕೊಂಡು ನಿನ್ನೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಸಾಗಲಗಟ್ಟೆ ಗ್ರಾಮದ ಕೆ.ಎಚ್. ಸುರೇಶ್ ಹಾಗೂ ಕೆ.ಕವಿತಾ ಅವರ ಪುತ್ರ ಸುನೀಲ್. ಈ ಹಿಂದೆ ಮುಗ್ಗಿದರಾಗಿಹಳ್ಳಿ ಮೊರಾರ್ಜಿ ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ. ಪೋಷಕರ ಮನವಿ ಮೇರೆಗೆ ಮ್ಯುಚ್ಯುಯಲ್ ಆಧಾರದ ಮೇಲೆ ಮೆದಗಿನಕೆರೆ ವಸತಿ ಶಾಲೆಗೆ ಸೇರ್ಪಡೆಯಾಗಿದ್ದ. ಕಳೆದ ಒಂದು ವಾರದ ಹಿಂದೆ ಅನಾರೋಗ್ಯದ ಹಿನ್ನೆಲೆಯಲ್ಲಿ ಪೋಷಕರು ಸಾಗಲಗಟ್ಟೆ ಗ್ರಾಮಕ್ಕೆ ಕರೆದೊಯ್ದಿದ್ದರು. ಶುಕ್ರವಾರ ಮತ್ತೆ ಪೋಷಕರು ವಸತಿ ಶಾಲೆಗೆ ಬಿಟ್ಟು ಹೋಗಿದ್ದರು.

ನಂತರ ಮಂಗಳವಾರ ಸಂಜೆ ಪೋಷಕರಿಗೆ ಕರೆ ಮಾಡಿ ನನ್ನನ್ನು ಇಲ್ಲಿಂದ ಕರೆದುಕೊಂಡು ಹೋಗಿ ಎಂದು ಮನವಿ ಮಾಡಿದ್ದ. ನಾಳೆ ಬರುತ್ತೇನೆ ಎಂದು ಪೋಷಕರು ಹೇಳಿದ್ದಾರೆ.

ಆದರೆ ಪೋಷಕರು ಬಾರದೇ ಇದ್ದಿದ್ದರಿಂದ ಮನನೊಂದು ಶೌಚಾಲಯಕ್ಕೆ ತೆರಳಿ ಕಿಟಕಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ತಿಳಿದು ಬಂದಿದೆ.

ಶೌಚಾಲಯದಲ್ಲಿ ನೇಣು ಬಿಗಿದುಕೊಂಡು ಜೀವ ಹೋಗುವ ಹಂತದಲ್ಲಿದ್ದ ವಿದ್ಯಾರ್ಥಿಯನ್ನು ಜಗಳೂರಿನ ಸರ್ಕಾರಿ ಆಸ್ಪತ್ರೆಗೆ ಕರೆತರುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ.

ಈ ಸಂಬಂಧ ಬಿಳಿಚೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಸ್ಪತ್ರೆಯಲ್ಲಿ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ಘಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಡಿ.ರೇಷ್ಮಾ ಕೌಸರ್, ಡಿ.ವೈ.ಎಸ್ಪಿ ಕನ್ನಿಕಾ ಸಿಕ್ರಿವಾಲ್, ತಹಶೀಲ್ದಾರ್ ಜಿ.ಸಂತೋಷ್ ಕುಮಾರ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ, ಸಿಪಿಐ ಸತ್ಯನಾರಾಯಣ, ಜಗಳೂರು ಪಿಎಸ್ಐ ಮಹೇಶ್, ಹೊಸಪೇಟೆ ಪ್ರಾಂಶುಪಾಲರಾದ ರೂಪಕಲಾ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಧ್ಯಾನ ಶಿಬಿರ ಇಂದಿನಿಂದ 4 ದಿನ ಆಲೂರ್ ಕನ್ವೆನ್ಷನ್ ಹಾಲ್‌ನಲ್ಲಿ ನಡೆಯಲಿದೆ ಎಂದು ಪುಷ್ಪ (90367 19573), ಅರ್ಚನ (9738572318) ತಿಳಿಸಿದ್ದಾರೆ.

## ನಿರುದ್ಯೋಗಿ ಅಭ್ಯರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ

ದಾವಣಗೆರೆ, ಆ. 24 - ಒಕ್ಕಲಿಗ ಸಮುದಾಯದ ಸರ್ವತೋಮುಖ ಅಭಿವೃದ್ಧಿ ನಿಗಮದಿಂದ ಒಕ್ಕಲಿಗರ ಸ್ವಯಂ ಉದ್ಯೋಗ ಯೋಜನೆ, ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿ / ಸರಕು ಸಾಗಾಣಿಕೆ ವಾಹನ ಕೊಳ್ಳಲು ಸಹಾಯಧನ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಸ್ವಾತಂತ್ರ್ಯ ಅಮೃತ ಮಹೋತ್ಸವ ಮುನ್ನಡೆ ಯೋಜನೆಯಲ್ಲಿ ನಿರುದ್ಯೋಗಿ ಯುವಕ ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗುತ್ತದೆ.

ಈ ಯೋಜನೆಯ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಲು ಇದೇ ದಿನಾಂಕ 30 ಕೊನೆಯ ದಿನವಾಗಿರುತ್ತದೆ. ವಿವರಕ್ಕೆ ನಿಗಮದ ವೆಬ್‌ಸೈಟ್ https://kvcdc.karnataka.gov.in ನ್ನು ವೀಕ್ಷಿಸಬಹುದು.

## ಮಡಿವಾಳ ಮಾಚೀದೇವ ಸಂಘದ ಗೌರವಾಧ್ಯಕ್ಷರಾಗಿ ಅಶೋಕ್ ಹರಾಳ್



**ಹರಪನಹಳ್ಳಿ**

ಹರಪನಹಳ್ಳಿ, ಆ.24- ತಾಲ್ಲೂಕಿನ ಮಡಿವಾಳ ಮಾಚಿದೇವ ಸಂಘದ ತಾಲೂಕು ಗೌರವಾಧ್ಯಕ್ಷರಾಗಿ ಹೆಚ್.ಎಂ. ಅಶೋಕ ಆಯ್ಕೆಯಾಗಿದ್ದಾರೆ.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ನಡೆದ ಸಮುದಾಯದ ಸಭೆಯಲ್ಲಿ ತಾಲೂಕು ಅಧ್ಯಕ್ಷರಾಗಿ ಮಜ್ಜಿಗೆರೆ ಬಸವರಾಜ, ಪ್ರಧಾನ ಕಾರ್ಯದರ್ಶಿಯಾಗಿ ಎಂ. ಭರ್ಮಪ್ಪ ತೌಡೂರ್, ಕೋಶಾಧ್ಯಕ್ಷರಾಗಿ ಹರಪನಹಳ್ಳಿಯ ಚಂದ್ರಕಾಂತ್, ಉಪಾಧ್ಯಕ್ಷರುಗಳಾಗಿ ಗುಂಡಗತ್ತಿ ಎಂ. ದೊಡ್ಡ ಕೋಟೆಪ್ಪ, ಎಂ. ಮಹಾಂತೇಶ್ ಕಂಚಿಕೇರಿ, ಎಂ. ಕೆಂಚಪ್ಪ, ಕಾರ್ಯದರ್ಶಿಯಾಗಿ ನಿಟ್ಟೂರು ಎಂ. ಬಸವರಾಜ, ಸಹ ಕಾಯದರ್ಶಿ ಸಾಸವಿಹಳ್ಳಿ ಎಂ. ಬಸವರಾಜಪ್ಪ, ಹಲವಾಗಲು ಎಂ.ನಾಗರಾಜ, ಖಜಾಂಚಿ ಹಲವಾಗಲು ಎಂ ಜಯರಾಜ್, ಕಾನೂನು ಸಲಹೆಗಾರರಾಗಿ ಹರಪನಹಳ್ಳಿ ತಿಪ್ಪೇಸ್ವಾಮಿ, ಸಂಘಟನಾ ಕಾರ್ಯದರ್ಶಿ ಗುಂಡಗತ್ತಿ ಎಂ.ಹನುಮಂತಪ್ಪ, ಹನುಮಂತಪ್ಪ, ನಿರ್ದೇಶಕರಾಗಿ ಎಂ.ಶಿಂಗ್ರಿಹಳ್ಳಿಯ ಎಂ.ಮಲ್ಲೇಶಪ್ಪ ಗುಂಡಗತ್ತಿಯ ಎಂ.ಬಸವರಾಜ್, ಯುವ ಘಟಕದ ತಾಲೂಕು ಅಧ್ಯಕ್ಷ ಗುಂಡಗತ್ತಿ ಎಂ.ಮಾರುತಿ, ಪ್ರಧಾನ ಕಾರ್ಯದರ್ಶಿ ವೀರೇಶ್ ಖಜಾಂಚಿಯಾಗಿ ಅಡವಿಹಳ್ಳಿಯ ಮಲ್ಲಿಕಾರ್ಜುನ ಅವರನ್ನು ಆಯ್ಕೆ ಮಾಡಲಾಗಿದೆ.

ತಾಲ್ಲೂಕಿನ ಮಡಿವಾಳ ಮಾಚಿದೇವ ಸಂಘದ ನೂತನ ಗೌರವಾಧ್ಯಕ್ಷ ಹೆಚ್.ಎಂ.ಅಶೋಕ್ ಮಾತನಾಡಿ, ಸಮಾಜದ ಯುವ ಪೀಳಿಗೆ ಶರಣರ ಆಚಾರ-ಆದರ್ಶಗಳನ್ನು ಪ್ರತಿಯೊಬ್ಬರು ತಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿ ಕೊಂಡು, ಮಡಿವಾಳ ಸಮಾಜ ಸಂಘಟನೆಗಾಗಿ, ಶಿಕ್ಷಣ ಪಡೆದು ಸರ್ಕಾರದ ಸವಲತ್ತುಗಳನ್ನು ಪಡೆದು ಸಮಾಜದ ಶ್ರೇಯೋಭಿವೃದ್ದಿಗೆ ಎಲ್ಲರೂ ಶ್ರಮಿಸಬೇಕಿದೆ ಎಂದರು.

## ಆರೋಗ್ಯ ಕ್ಷೇತ್ರದ ದೂರದೃಷ್ಟಿಗೆ ಕರ್ನಾಟಕ ವಿಷನ್

ಬೆಂಗಳೂರು, ಆ. 24 - ಇಡೀ ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಕರ್ನಾಟಕದಲ್ಲಿ ಆರೋಗ್ಯ ಕ್ಷೇತ್ರದ ದೂರದೃಷ್ಟಿಗಾಗಿ ಕರ್ನಾಟಕ ವಿಷನ್ ವರದಿ ಹೊರತರಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ರಾಷ್ಟ್ರೀಯ ವೈದ್ಯರ ದಿನಾಚರಣೆ ಸಂದರ್ಭದಲ್ಲಿ ಮಾತನಾಡಿದ ಅವರು, ಡಾ. ಗುರುರಾಜ್ ನೇತೃತ್ವದ ತಂಡ ಒಂದು ವರ್ಷ ಕಾಲ ಅಧ್ಯಯನಗಳು, ಸಂಶೋಧನೆಗಳು, ಸಭೆಗಳನ್ನು ನಡೆಸಿ ಈ ವರದಿ ರೂಪಿಸಿದೆ. 250 ಕ್ಕೂ ಅಧಿಕ ತಜ್ಞರು ಈ ವರದಿ ರೂಪಿಸಲು ಸಲಹೆ ನೀಡಿದ್ದಾರೆ ಎಂದು ಹೇಳಿದರು.

ಬೇರೆ ದೇಶಗಳ ಉತ್ತಮ ಕ್ರಮಗಳನ್ನು ಕೂಡ ಇಲ್ಲಿ ದಾಖಲಿಸಲಾಗಿದೆ. ಟೆಲಿ ಮೆಡಿಸಿನ್, ಗ್ರಾಮೀಣ ಪ್ರದೇಶದಿಂದ ಆರಂಭವಾಗಿ ತೃತೀಯ ಹಂತದ ಆರೋಗ್ಯ ಸೇವೆ ಸೇರಿದಂತೆ ಅನೇಕ ಅಂಶಗಳನ್ನು ಇದು ಒಳಗೊಂಡಿದೆ. ಇದನ್ನು ಮುಖ್ಯಮಂತ್ರಿಗಳು ಪ್ರಧಾನಿಗಳಿಗೂ ನೀಡಲಿದ್ದಾರೆ ಎಂದರು.

## ತುರ್ಚಘಟ್ಟ : ಇಂದು ಕಾಮಗಾರಿಗಳ ಉದ್ಘಾಟನೆ

ದಾವಣಗೆರೆ ತಾಲ್ಲೂಕು ತುರ್ಚಘಟ್ಟ ಗ್ರಾಮದ ನಿರಾಶ್ರಿತರ ಪರಿಹಾರ ಕೇಂದ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮ ಇಂದು ಬೆಳಿಗ್ಗೆ 11.30 ಕ್ಕೆ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ (ಭೈರತಿ) ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದ ಜಿ.ಎಂ. ಸಿದ್ದೇಶ್ವರ, ವಿಧಾನ ಪರಿಷತ್ ಸರ್ಕಾರಿ ಮುಖ್ಯ ಸಚೇತಕ ಡಾ. ವೈ.ಎ. ನಾರಾಯಣಸ್ವಾಮಿ, ಶಾಸಕರಾದ ಎಸ್.ಎ. ರವೀಂದ್ರನಾಥ್, ಮೋಹನ್ ಕುಮಾರ್ ಕೊಂಡಜ್ಜಿ, ಕೆ.ಪಿ. ನಂಜುಂಡಿ, ಅಬ್ದುಲ್ ಜಬ್ಬಾರ್, ಕೆ.ಎಸ್. ನವೀನ್, ಕೇಂದ್ರ ಪರಿಹಾರ ಸಮಿತಿ ಸದಸ್ಯ ಎಂ. ಬಸವರಾಜನಾಯ್ಕ, ಬೆಳವನೂರು ಗ್ರಾ.ಪಂ. ಅಧ್ಯಕ್ಷ ಎಸ್.ಟಿ. ಹನುಮಂತಪ್ಪ ಭಾಗವಹಿಸಲಿದ್ದಾರೆ.

## ಬೊಮ್ಮಾಯಿ ಸರ್ಕಾರದಲ್ಲಿ 50% ಕಮೀಷನ್

**(1ನೇ ಪುಟದಿಂದ)** 22,000 ಕೋಟಿಗೂ ಅಧಿಕ ಹಣ ಬಿಡುಗಡೆಯಾಗಬೇಕಿದೆಯಂತೆ. ಈ ಬೃಹತ್ ಬಾಕಿ ಮೊತ್ತವನ್ನು ಆದ್ಯತೆ ಮೇಲೆ ತಕ್ಷಣ ಬಿಡುಗಡೆ ಮಾಡಬೇಕು ಎಂದು ಒತ್ತಾಯ ಮಾಡಿದ್ದಾರೆ. ಇನ್ನೊಂದು ವಿಚಾರವೆಂದರೆ ಅನುದಾನ ಮೀಸಲಿಡದೆ ಟೆಂಡರ್ ಕರೆಯುತ್ತಾರೆ, ಇದರಿಂದ ಕಾಮಗಾರಿ ಹಣ ಬಿಡುಗಡೆ ಆಗುವುದು ಹೇಗೆ? ಎಂದು ಅವರು ಪ್ರಶ್ನಿಸಿದ್ದಾರೆ.

ನಾವು ಸರ್ಕಾರದ ಮೇಲೆ ನ್ಯಾಯಾಂಗ ತನಿಖೆ ನಡೆಸುವಂತೆ ಒತ್ತಡ ಹಾಕುತ್ತೇವೆ. ಒಂದು ವೇಳೆ ಸರ್ಕಾರ ನಮ್ಮ ಆಗ್ರಹಕ್ಕೆ ಬೆಲೆ ಕೊಡದೇ ಹೋದರೆ, ಈ ವಿಚಾರವನ್ನು ಜನರ ಬಳಿಗೆ ತೆಗೆದುಕೊಂಡು ಹೋಗುತ್ತೇವೆ ಎಂದವರು ಹೇಳಿದ್ದಾರೆ.

ಸಚಿವ ಮುನಿರತ್ನ ಅವರ ಹೆಸರು ಪ್ರಸ್ತಾಪ ಮಾಡಿದ್ದಾರೆ, ಇದರ ಜೊತೆಗೆ ನೀರಾವರಿ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಇಲಾಖೆ, ಬೆಂಗಳೂರು ನಗರಾಭಿವೃದ್ಧಿ ಇಲಾಖೆಗಳಲ್ಲೂ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಅವರು ಹೇಳಿದ್ದಾರೆ.

ನರೇಂದ್ರ ಮೋದಿ ಅವರು ಚುನಾವಣಾ ಭಾಷಣದಲ್ಲಿ ಸಿದ್ದರಾಮಯ್ಯ ಅವರ ಸರ್ಕಾರ 10% ಕಮೀಷನ್ ಸರ್ಕಾರ ಎಂದು ಆರೋಪ ಮಾಡಿದಾಗ ಎಲ್ಲರೂ ಅದಕ್ಕೆ ಪ್ರಚಾರ ನೀಡಿದರು, ಯಾರೂ ಅವರ ಬಳಿ ದಾಖಲೆ ಕೇಳಿಲ್ಲ. ಈಗ ಗುತ್ತಿಗೆದಾರರ ಸಂಘದವರು ಸರ್ಕಾರದ ಭ್ರಷ್ಟಾಚಾರವನ್ನು ಸಾಬೀತು ಮಾಡಲು ಸಿದ್ಧರಿದ್ದಾರೆ. ತನಿಖೆ ಆಗಬೇಕೋ ಬೇಡವೋ? ಎಂದು ಪ್ರಶ್ನಿಸಿದರು.

## ಸಾಕ್ಷಿ ಕೊಡಿ, ಶಿಕ್ಷೆ ಖಚಿತ

**(1ನೇ ಪುಟದಿಂದ)** ಕಡಿವಾಣಕ್ಕೆ ಸಂಬಂಧಿಸಿದಂತೆ ನೀಡಿದ ಸಲಹೆಗಳನ್ನು ಜಾರಿಗೆ ತರಲಾಗಿದೆ. ಇನ್ನೂ ಯಾವುದಾರೂ ಸಲಹೆಗಳಿದ್ದರೆ ನೀಡಲಿ, ಅದನ್ನೂ ಸರಿಪಡಿಸುತ್ತೇವೆ ಎಂದವರು ಹೇಳಿದ್ದಾರೆ.

ರಾಜಕೀಯ ಪ್ರೇರಿತ, ಉದ್ದೇಶಪೂರಿತ ಆರೋಪ ಮಾಡಿದರೆ ಅದಕ್ಕೆ ಬೆಲೆ ಇಲ್ಲ. ಅವರ ಬಳಿ ಪುರಾವೆ ಮತ್ತು ದಾಖಲೆಗಳಿದ್ದರೆ ಈಗ ಎಸಿಬಿ ಮುಂದೆ ಅಲ್ಲ, ಲೋಕಾಯುಕ್ತದ ಮುಂದೆ ದೂರು ನೀಡಲಿ ಎಂದರು.

ಈ ಹಿಂದೆ ಗುತ್ತಿಗೆದಾರರ ಆರೋಪ ಬಂದ ನಂತರ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಪರಿಶೀಲನಾ ಸಮಿತಿ ರಚಿಸಲಾಗಿದ್ದು, ಹೀಗಾಗಿ ಎಲ್ಲ ವ್ಯವಹಾರಗಳನ್ನು ಅದು ಪರಿಶೀಲಿಸಲಿದೆ ಎಂದು ವಿವರ ನೀಡಿದರು.

ಈ ರೀತಿ ವಿನಾಕಾರಣ ಆರೋಪ ಮಾಡುವ ಬದಲು ನಿರ್ದಿಷ್ಟ ಪ್ರಕರಣಗಳಿದ್ದರೆ ಹೇಳಲಿ,ಅದನ್ನು ಬಿಟ್ಟು ಏನೋ ಹೇಳಿದರೆ ಅದಕ್ಕೆ ತೂಕ ಬರುವುದಿಲ್ಲ ಎಂದರು.

ಕಮೀಷನ್ ಆರೋಪದ ಕುರಿತು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆಯುವುದಾಗಿ ಗುತ್ತಿಗೆದಾರರ ಸಂಘ ಹೇಳಿರುವ ಕುರಿತು ಪ್ರತಿಕ್ರಿಯಿಸಿದ ಅವರು, ದೇಶದ ಪ್ರಧಾನಮಂತ್ರಿಗಳಿಗೆ ಪತ್ರ ಬರೆಯುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ಆದರೆ ದೂರು ನೀಡುವಾಗ ಸಾಮಾನ್ಯ ಹೇಳಿಕೆ ಸಾಲದು,ನಿರ್ದಿಷ್ಟ ಪ್ರಕರಣದ ದಾಖಲೆ ಬೇಕು ಎಂದರು.

## ಗ್ರಾಪ್ಲಿಂಗ್ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ



ಹರಪನಹಳ್ಳಿ, ಆ.24- ಬೆಂಗಳೂರಿನಲ್ಲಿ ಗ್ರಾಪ್ಲಿಂಗ್ ಫೆಡರೇಶನ್ ಇಂಡಿಯಾ ವತಿಯಿಂದ ಕಳೆದ ವಾರ ಜರುಗಿದ 15ನೇ ಗ್ರಾಪ್ಲಿಂಗ್ ಚಾಂಪಿಯನ್ ಶಿಪ್ ಪಂದ್ಯಾವಳಿಯಲ್ಲಿ ಗೋಲ್ಡ್ ಮೆಡಲ್ ಪಡೆದು ಹರಿಯಾಣದಲ್ಲಿ ಜರುಗುವ ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾದ ತಾಲ್ಲೂಕಿನ ಅರಸಿಕೇರಿಯ ಎಸ್.ಎಂ.ಸಿ.ಕೆ. ಪ.ಪೂ. ಕಾಲೇಜಿನ ಕೆ.ಬಸಮ್ಮ ಹಾಗೂ ಎನ್. ಅಂಬಿಕಾ ಅವರಿಗೆ ಸಂಸದ ವೈ.ದೇವೇಂದ್ರಪ್ಪ ಪುತ್ರ ವೈ.ಡಿ. ಅಣ್ಣಪ್ಪ ಅವರು ಪ್ರೋತ್ಸಾಹ ಧನ ವಿತರಿಸಿದರು. ಮುಖ್ಯ ತರಬೇತುದಾರರಾದ ಚಂದ್ರಕುಮಾರ್, ನಾಗರಾಜ್, ದೇವರಾಜ್, ಉಪನ್ಯಾಸಕ ಪಿ. ದುರುಗೇಶ್ ಸೇರಿದಂತೆ ಇತರರು ಇದ್ದರು.

## ಜೈನ್ ವಿದ್ಯಾಲಯದಲ್ಲಿ ಕೃಷ್ಣ ಜನ್ಮಾಷ್ಟಮಿ



ದಾವಣಗೆರೆ, ಆ.23- ನಗರದ ಜೈನ್ ವಿದ್ಯಾಲಯದ ನರ್ಸರಿ ವಿಭಾಗದಲ್ಲಿ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು. ಮಕ್ಕಳು ಕೃಷ್ಣ ಮತ್ತು ರಾಧೆಯರ ವೇಷ ಭೂಷಣವನ್ನು ಧರಿಸಿ, ವಿವಿಧ ಆಟಗಳನ್ನು ಆಡಿ ಸಂಭ್ರಮಿಸಿದರು.

## ಅಮೆರಿಕನ್ ಎಕ್ಸ್‌ಪ್ರೆಸ್ ಮೇಲಿನ ನಿರ್ಬಂಧ ತೆರವು

ಮುಂಬೈ, ಆ. 24 – ಅಮೆರಿಕನ್ ಎಕ್ಸ್‌ಪ್ರೆಸ್ ಬ್ಯಾಂಕ್ ಮೇಲೆ ಹೇರಲಾಗಿದ್ದ ನಿರ್ಬಂಧವನ್ನು ತೆರವುಗೊಳಿಸಿರುವ ರಿಸರ್ವ್ ಬ್ಯಾಂಕ್, ಹೊಸ ಗ್ರಾಹಕರಿಗೆ ಬ್ಯಾಂಕಿಂಗ್ ಕಾರ್ಡುಗಳನ್ನು ನೀಡಲು ಅವಕಾಶ ಮಾಡಿಕೊಟ್ಟಿದೆ. ಪಾವತಿ ಮಾಹಿತಿ ಸಂಗ್ರಹಿಸುವ ಕುರಿತ ನಿರ್ದೇಶನಗಳನ್ನು ಪಾಲಿಸದ ಕಾರಣಕ್ಕಾಗಿ ಮೇ 1, 2021ರಂದು ಅಮೆರಿಕನ್ ಎಕ್ಸ್‌ಪ್ರೆಸ್ ಮೇಲೆ ರಿಸರ್ವ್ ಬ್ಯಾಂಕ್ ನಿರ್ಬಂಧ ಹೇರಿತ್ತು. ನಂತರ ನಿಯಮಗಳನ್ನು ಪಾಲಿಸಲು ಬ್ಯಾಂಕ್ ಕ್ರಮಗಳನ್ನು ತೆಗೆದುಕೊಂಡಿತ್ತು.

## ಡಿಪ್ಲೋಮಾ ಲ್ಯಾಟರಲ್ ಎಂಟ್ರಿಗೆ ಪ್ರವೇಶಕ್ಕೆ ಅರ್ಜಿ

ದಾವಣಗೆರೆ, ಆ.24- ದ್ವಿತೀಯ ವರ್ಷದ ಡಿಪ್ಲೋಮಾ, ಲ್ಯಾಟರಲ್ ಎಂಟ್ರಿ ಪ್ರವೇಶಕ್ಕೆ ಐಟಿಐ/ ದ್ವಿತೀಯ ಪಿಯುಸಿ (ವಿಜ್ಞಾನ) ತಾಂತ್ರಿಕ ವಿಷಯಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಡಿ.ಆರ್.ಆರ್ ಪಾಲಿಟೆಕ್ನಿಕ್‌ನಲ್ಲಿ ದ್ವಿತೀಯ ವರ್ಷದ ಡಿಪ್ಲೋಮಾ ಲ್ಯಾಟರಲ್ ಎಂಟ್ರಿಗೆ ಪ್ರವೇಶ ಬಯಸುವವರು, ಐಟಿಐ/ದ್ವಿತೀಯ ಪಿಯುಸಿ (ವಿಜ್ಞಾನ) ತಾಂತ್ರಿಕ ವಿಷಯಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ದಿನಾಂಕ 30 ಕೊನೆ ದಿನ ಎಂದು ಸೈಯದ್ ಸಾಧಿಕ್ ಉಲ್ಲಾ, (94813 59019), ಹೆಚ್. ಜಗದೀಶ್ (97418 02066) ತಿಳಿಸಿದ್ದಾರೆ.

## ಸಿಇಟಿ : ಹೊನ್ನಾಳಿಯಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪರಿಶೀಲನೆ



ಹೊನ್ನಾಳಿ, ಆ.24- ತಾಲ್ಲೂಕಿನ ಪಿಯುಸಿ ವಿದ್ಯಾರ್ಥಿಗಳು ಸಿಇಟಿಯಲ್ಲಿ ಪಡೆದ ಇಂಜಿನಿಯರಿಂಗ್ ರ್‍ಯಾಂಕಿಂಗ್ ಆಧಾರದಲ್ಲಿನ ವಿದ್ಯಾರ್ಥಿಗಳ ಸಿಇಟಿ ಮಾದರಿಯ ದಾಖಲೆ ಪರಿಶೀಲನೆಯನ್ನು ಬಿಆರ್‌ಸಿ ಕಛೇರಿಯಲ್ಲಿ ನಡೆಸಲಾಗುತ್ತಿದೆ.

ಈ ಕಾರ್ಯಕ್ಕೆ ನಿಯೋಜನೆ ಗೊಂಡಿರುವ ಬಿಆರ್‌ಪಿ ನೀಲೇಶ್ ಕುಮಾರ್ ಮಾತನಾಡಿ ತಾವು ನಡೆಸುತ್ತಿರುವ ಪರಿಶೀಲನೆ ಕಾರ್ಯದಲ್ಲಿ ವಿದ್ಯಾರ್ಥಿಗಳ ಕನ್ನಡ ಮಾಧ್ಯಮ ಕಲಿಕೆ, ಗ್ರಾಮೀಣ ವ್ಯಾಸಂಗ ದೃಢೀಕರಣ, ಅಲ್ಪಸಂಖ್ಯಾತ ದಾಖಲಾತಿ ಪರಿಶೀಲನೆ ಕಾರ್ಯ ನಡೆಸಲಾಗುತ್ತಿದೆ ಎಂದರು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಆಗಸ್ಟ್ 22 ರಿಂದ ಈ ಕಾರ್ಯ ಆರಂಭಗೊಳಿಸಿದ್ದು ಸೆಪ್ಟೆಂಬರ್ 7ರ ವರೆಗೆ ನಡೆಯಲಿದೆ. ಆರಂಭಗೊಂಡ ಎರಡು ದಿನಗಳಲ್ಲಿ ಒಟ್ಟು 23 ವಿದ್ಯಾರ್ಥಿಗಳು ದಾಖಲಾತಿಯನ್ನು ತಾಲ್ಲೂಕಿನಲ್ಲಿ ಆನಲೈನ್‌ಗೊಳಿಸಲಾಗಿದೆ ಎಂದರು.

ವಿದ್ಯಾರ್ಥಿಗಳ ಸಿಇಟಿ ರ್‍ಯಾಂಕಿಂಗ್ ನಿಗದಿಗೊಳಿಸಿದ ದಿನಾಂಕದಂದು ವಿದ್ಯಾರ್ಥಿಗಳ ವ್ಯಾಸಂಗ ದೃಢೀಕರಣ ದಾಖಲೆಗಳ ಪರಿಶೀಲನೆ ನಡೆಸಲಾಗುತ್ತಿದೆ ಎಂದರು. ತಾಂತ್ರಿಕ ಸಲಹೆಗಾರ ರವಿಕುಮಾರ್, ಸಿಬ್ಬಂದಿ ಇದ್ದರು.

## ಪಶುವೈದ್ಯ ರೇಣುಕಾರಾಧ್ಯರಿಗೆ ಸನ್ಮಾನ



**ಹರಿಹರ**

ಹರಿಹರ,ಆ.24- ಇಲ್ಲಿನ ನಗರಸಭೆಯಿಂದ 75 ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂದರ್ಭದಲ್ಲಿ ಹಿರಿಯ ಪಶು ವೈದ್ಯಕೀಯ ಪರೀಕ್ಷಕರು ಹಾಗೂ ಪಶು ವೈದ್ಯಕೀಯ ಸಂಘದ ಅಧ್ಯಕ್ಷರೂ ಆದ ರೇಣುಕಾರಾಧ್ಯ ಅವರನ್ನು ಸನ್ಮಾನಿಸಲಾಯಿತು.

ತಮ್ಮ ಕರ್ತವ್ಯದ ಸಮಯ ಮುಗಿದ ಮೇಲೂ ಕೂಡ ನಿರ್ಲಕ್ಷ ತೋರಿಸದೆ ಹಸನ್ಮುಖರಾಗಿ ಪ್ರಾಣಿಗಳ ಚಿಕಿತ್ಸೆಯಲ್ಲಿ ತೊಡಗಿರುವ ರೇಣುಕಾರಾಧ್ಯರನ್ನು ಸನ್ಮಾನಿಸಿದುದು ಅತ್ಯಂತ ಶ್ಲಾಘನೀಯ ಎಂದು ಗುರು ದ್ರೋಣಾಚಾರ್ಯ ಸಮ್ಮಾನ ಪುರಸ್ಕೃತ ಕಲಾವಿದ ಡಾ. ಜಿ. ಜೆ. ಮೆಹೆಂದಳೆ ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಹರಿಹರ ತಹಶೀಲ್ದಾರ್, ನಗರಸಭೆ ಅಧ್ಯಕ್ಷರಾದ ಶಾಹೀನಾಬಾನು ದಾದಾಪೀರ್, ಪೌರಾಯುಕ್ತ ಐ. ಬಸವರಾಜ, ನಗರಸಭೆ ಸದಸ್ಯರಾದ ಶಂಕರ ಖಟಾವ್‌ಕರ್, ದಾದಾ ಖಲಂದರ್, ರಜನಿಕಾಂತ್, ವಿಜಯಕುಮಾರ್, ನಾಗರತ್ನಮ್ಮ, ಸುಬ್ರಹ್ಮಣ್ಯ ನಾಡಿಗೇರ್ ಮತ್ತಿತರರು ಉಪಸ್ಥಿತರಿದ್ದರು.

## ಜೊತೆ ನಿಕಟವಾಗಿ ಬೆಸೆದುಕೊಂಡಿವೆ

**(1ನೇ ಪುಟದಿಂದ)** ಸ್ಪೆಷಾಲಿಟಿ ಆಸ್ಪತ್ರೆ 500 ಬೆಡ್‌ಗಳನ್ನು ಹೊಂದಿದೆ. 5 ವರ್ಷಗಳಲ್ಲಿ ಹಂತ ಹಂತವಾಗಿ ವಿಸ್ತಾರಗೊಳ್ಳಲಿದೆ. ಆಗ ಇದು ದೇಶದಲ್ಲೇ ಅತಿ ದೊಡ್ಡ ಆಸ್ಪತ್ರೆಯಾಗಲಿದೆ ಎಂದು ಆಸ್ಪತ್ರೆಯ ಅಧಿಕಾರಿಗಳು ತಿಳಿಸಿದ್ದಾರೆ.

### ಎನ್.ಪಿ. ಮನೋಜ್ ಕುಮಾರ್ ನಿಧನ



ದಾವಣಗೆರೆ ಗಾಂಧಿ ನಗರದ ವಾಸಿಯಾದ ಚೌಡಕಿ ಪಂಚಾಕ್ಷರಿ ಪಿ.ಎನ್ ಹಾಗೂ ಶ್ರೀಮತಿ ವಿಶಾಲಾಕ್ಷಿ ದಂಪತಿಯ ಪುತ್ರ ಎನ್.ಪಿ. ಮನೋಜ್ ಕುಮಾರ್ (25) ಇವರು ದಿನಾಂಕ: 24.8.2022 ರ ಬುಧವಾರ ಮಧ್ಯಾಹ್ನ 1.30ಕ್ಕೆ ನಿಧನರಾದರು. ಇಬ್ಬರು ಸಹೋದರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 25.8.2022ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಗಾಂಧಿ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

## ಗಣೇಶೋತ್ಸವಕ್ಕೆ ಅನುಮತಿ ಕಡ್ಡಾಯ

**(1ನೇ ಪುಟದಿಂದ)** ನಿಯಮಗಳನ್ನು ಪಾಲಿಸುವ ಜವಾಬ್ದಾರಿ ಸಮಿತಿ ಮೇಲೆ ಇರುತ್ತದೆ ಎಂದರು.

ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಉಪ ಪರಿಸರ ಅಧಿಕಾರಿ ಸಂತೋಷ್ ಮಾತನಾಡಿ, ಸಾಧ್ಯವಾದಷ್ಟು ಪರಿಸರ ಸ್ನೇಹಿ ಮಣ್ಣಿನ ಗಣಪತಿ ಪ್ರತಿಷ್ಠಾಪಿಸಬೇಕು. ಪ್ಲಾಸ್ಟಿಕ್ ಹಾಗೂ ಥರ್ಮಾಕೋಲ್ ಬಳಸದೆ ಪರಿಸರ ಕಾಳಜಿ ಮೆರೆಯುವ ಮೂಲಕ ಗಣೇಶ ಹಬ್ಬವನ್ನು ಆಚರಣೆ ಮಾಡೋಣ ಎಂದರು.

ಮಹಾನಗರ ಪಾಲಿಕೆ ಅಧಿಕಾರಿ ಸಂತೋಷ್ ಮಾತನಾಡಿ, ಗಣೇಶ ಮೂರ್ತಿಗಳ ವಿಸರ್ಜನೆಗೆ ಬಾತಿಕೆರೆ ಮತ್ತು ಹದಡಿ ರಸ್ತೆಗಳಲ್ಲಿ ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರು ಮನೆಗಳಲ್ಲಿ ಪ್ರತಿಷ್ಠಾಪಿಸುವ ಗಣಪತಿ ವಿಸರ್ಜನೆಗೆ ಮೊಬೈಲ್ ಟ್ಯಾಂಕ್ ಮೂಲಕ ವಿಸರ್ಜನೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಹರಿಹರದ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಹರಿಹರದಲ್ಲಿ ಗಣೇಶ ವಿಸರ್ಜನೆಯ ದಿನ ಮುಸ್ಲಿಂ ಸಮುದಾಯದಿಂದ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿದೆ ಎಂದರು.

ನಗರದ ಹೈಸ್ಕೂಲ್ ಮೈದಾನದ ಹಿಂದೂ ಮಹಾ ಗಣಪತಿ ಸಮಿತಿಯ ಈಶ್ವರ್ ಶಿಂಧೆ ಮಾತನಾಡಿ, ಹೈಸ್ಕೂಲ್ ಮೈದಾನದಲ್ಲಿ ಗಣೇಶನ ಮೂರ್ತಿ ಪ್ರತಿಷ್ಠಾಪನೆಯ ದಿವ್ಯ ಸಾನ್ನಿಧ್ಯವನ್ನು ಸಿರಿಗೆರೆ ಮಠದ ತರಳಬಾಳು ಜಗದ್ಗುರು ಶ್ರೀ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ. ಪ್ರತಿನಿತ್ಯ 10 ರಿಂದ 15 ಸಾವಿರ ಭಕ್ತರು ದರ್ಶನಕ್ಕೆ ಆಗಮಿಸುವ ಸಂಭವವಿದೆ. ಸೂಕ್ತ ಬಂದೋಬಸ್ತ್ ಒದಗಿಸಲು ತಾತ್ಕಾಲಿಕ ಪೊಲೀಸ್ ಠಾಣೆ ಸ್ಥಾಪಿಸಬೇಕು ಎಂದು ಮನವಿ ಮಾಡಿದರು.

ಸಾಮಾಜಿಕ ಕಾರ್ಯಕರ್ತ ಶ್ರೀಕಾಂತ್, ದೀಪಾಲಂಕಾರ ಮತ್ತು ಧ್ವನಿವರ್ಧಕಗಳ ಮಾಲೀಕರ ಸಂಘದ ಲಕ್ಷ್ಮಣ್, ಮುಸ್ಲಿಂ ಸಮುದಾಯದ ಮುಖಂಡ ಅಮಾನುಲ್ಲಾ ಖಾನ್, ಕೆ.ಹೆಚ್ ಮಂಜುನಾಥ, ಮಲ್ಲೇಶ್ ವಾಹಿ, ಚಂದ್ರಕುಮಾರ್, ಸರ್ದಾರ್ ಸಾಬ್, ಅಯೂಬ್ ಪೈಲ್ವಾನ್, ಗುರುನಾಥ ಬಾಬು, ಸಿರಾಜ್, ರಾಜನಹಳ್ಳಿ ಶಿವಕುಮಾರ್, ಸತೀಶ್ ಪೂಜಾರಿ, ಮಹಮ್ಮದ್ ಫೈರೋಜ್, ಶಂಕರ್ ನಾರಾಯಣ್, ಶಾಂತಕುಮಾರ್ ಹಾಗೂ ಪೇಟೆ ಪ್ರಶಾಂತ್ ಮಾತನಾಡಿದರು.

ಸಭೆಯಲ್ಲಿ ಜಿ.ಪಂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ.ಎ.ಚನ್ನಪ್ಪ, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮಗೊಂಡ ಬಸರಗಿ, ಉಪವಿಭಾಗಾಧಿಕಾರಿಗಳಾದ ದುರ್ಗಾಶ್ರೀ ಹಾಗೂ ಹುಲ್ಲುಮನಿ ತಿಮ್ಮಣ್ಣ, ಡಿವೈಎಸ್ಪಿ ನರಸಿಂಹ ತಾಮ್ರಧ್ವಜ ಮತ್ತಿತರರು ಉಪಸ್ಥಿತರಿದ್ದರು.

### ಎಸ್ಪಿ ರಿಷ್ಯಂತ್ ಸೂಚನೆಗಳು

- ಸಾರ್ವಜನಿಕ ಗಣೇಶೋತ್ಸವಕ್ಕೆ ಅನುಮತಿ ಕಡ್ಡಾಯ
- ಫ್ಲೆಕ್ಸ್ ಬಳಕೆಗೆ ಪಾಲಿಕೆ ಅನುಮತಿ ಬೇಕು
- ಜವಾಬ್ದಾರಿಯುತ ಸ್ವಯಂ ಸೇವಕರನ್ನು ನೇಮಿಸಿ ಅವರಿಗೆ ಗುರುತಿನ ಚೀಟಿ ನೀಡಬೇಕು
- ಗಣೇಶ ಮೂರ್ತಿ ವಿಸರ್ಜನೆ ಸ್ಥಳದಲ್ಲಿ ಈಜು ಬರದವರು ಇಳಿಯಬಾರದು
- ಸರ್ಕಾರದ ಎಲ್ಲ ನಿಯಮಗಳ ಪಾಲನೆ ಜವಾಬ್ದಾರಿ ಗಣೇಶೋತ್ಸವ ಸಮಿತಿ ಮೇಲೆ
- ಮೆರವಣಿಗೆ ಮಾರ್ಗದಲ್ಲಿ ವಿದ್ಯುತ್ ಲೈನ್ - ಮರಗಳ ಪೂರ್ವ ವೀಕ್ಷಣೆ
- ವಿದ್ಯುತ್‌ಗಾಗಿ ಜನರೇಟರ್ ವ್ಯವಸ್ಥೆ
- ಬೆಳಿಗ್ಗೆ 6ರಿಂದ ರಾತ್ರಿ 10ರ ಒಳಗೆ ಸುಪ್ರೀಂ ಕೋರ್ಟ್ ಮಾರ್ಗಸೂಚಿ ಅನ್ವಯ ಧ್ವನಿವರ್ಧಕಗಳ ಬಳಕೆ
- ಗಣಪತಿ ಪ್ರತಿಷ್ಠಾಪನೆ ಸ್ಥಳದಲ್ಲಿ ರಾತ್ರಿ ವೇಳೆ ಸಮಿತಿಯ ಸ್ವಯಂ ಸೇವಕರು ಇರಬೇಕು

## ರಾಣೇಬೆನ್ನೂರಿನಲ್ಲಿ ಇಂದು ರೈತರಿಂದ ಬೃಹತ್ ಪ್ರತಿಭಟನೆ



ರಾಣೇಬೆನ್ನೂರು, ಆ.24- ಬೆಳೆ ವಿಮೆಯಲ್ಲಿ ಆಗಿರುವ ಅನ್ಯಾಯ, ಸರ್ಕಾರದ ವಿರುದ್ಧ ಧ್ವನಿ ಎತ್ತುವ ರೈತ ಹೋರಾಟಗಾರರ ಮೇಲೆ ವಿನಾಕಾರಣ ಪೊಲೀಸ್ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸಿ ಹೋರಾಟಗಾರರ ಧ್ವನಿ ಅಡಗಿಸಲು ಪ್ರಯತ್ನಿಸುವ ಸರ್ಕಾರದ ರೈತ ವಿರೋಧಿ ನೀತಿ ಹಾಗೂ ಮುಖ್ಯಮಂತ್ರಿ ಕೃಷಿ ಮಂತ್ರಿಗಳತವರು ಜಿಲ್ಲೆಯಲ್ಲೇ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಗುರುವಾರ ರೈತರ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಳ್ಳ ಲಾಗಿದೆ ಎಂದು ರೈತ ಮುಖಂಡರಾದ ರವೀಂದ್ರಗೌಡ ಎಫ್ ಪಾಟೀಲ, ಈರಣ್ಣ ಹಲಗೇರಿ ಹೇಳಿದರು.

ಅವರು ಇಂದು ತುರ್ತು ಪತ್ರಿಕಾಗೋಷ್ಠಿ ನಡೆಸಿ 25 ನೇ ತಾರೀಖಿನಂದು ಜಿಲ್ಲಾಧಿಕಾರಿಗಳು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳೊಂದಿಗೆ ಖುದ್ದು ಹಾಜರಿದ್ದು ಸಮಸ್ಯೆ ನಿವಾರಣೆಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದರು.

ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡ ಅಶೋಕ ಗಂಗನಗೌಡ, ಸುರೇಶ್ ಮಲ್ಲಾಪುರ, ಬಸನವಗೌಡ ಹುಲ್ಲತ್ತಿ, ಶಿವಾನಂದಪ್ಪ ಲಿಂಗದಹಳ್ಳಿ, ಪರ್ವತಗೌಡ ಕುಸಗೂರ, ಸುರೇಶಪ್ಪ ಸ. ಗರಡಿಮನಿ, ದಿಳ್ಳೆಪ್ಪ ಸತ್ಯಪ್ಪನವರ, ಬಸವರಾಜ ಕೊಂಗಿಯವರ, ಜಯಣ್ಣ ಬಿ. ಮಾಗನೂರು, ನಾಗರಾಜ ಬಿ., ರಾಮನಗೌಡ ಬಿ. ಪಾಟೀಲ, ಎಸ್.ಡಿ. ಹಿರೇಮಠ, ನಾಗರಾಜ ಸುರ್ವೆ, ಹರಿಹರಗೌಡ ಎಸ್. ಪಾಟೀಲ ಮತ್ತಿತರರು ಉಪಸ್ಥಿತರಿದ್ದರು.

# ಏಕಾಗ್ರತೆಯಿಂದ ಜೀವನದ ಗುರಿ ಸಾಧನೆ ಸಾಧ್ಯ

## ಅಥಣಿ ಕಾಲೇಜು ವಿದ್ಯಾರ್ಥಿ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸುಮತಿ ಜಯಪ್ಪ



ದಾವಣಗೆರೆ, ಆ. 24- ಚಂಚಲತೆ ಬಿಟ್ಟು ಏಕಾಗ್ರತೆಯನ್ನು ಮೈಗೂಡಿಸಿಕೊಂಡರೆ ಜೀವನದಲ್ಲಿ ಏನನ್ನಾದರೂ ಸಾಧಿಸಲು ಸಾಧ್ಯವಿದೆ ಎಂದು ಉಪನ್ಯಾಸಕರೂ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರೂ ಆದ ಶ್ರೀಮತಿ ಎ.ಜಿ. ಸುಮತಿ ಜಯಪ್ಪ ಅಭಿಪ್ರಾಯಪಟ್ಟರು.

ನಗರದ ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ 2022-23 ನೇ ಸಾಲಿನ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯೆಯೇ ನಿಜವಾದ ಸಂಪತ್ತು. ವಿದ್ಯೆ ಮತ್ತು ಬುದ್ದಿ ಇರುವವರು ಮಾತ್ರ ಪ್ರಪಂಚ ಆಳುತ್ತಾರೆ. ವಿದ್ಯೆ ಸಾಧಕನ ಸೊತ್ತೇ ಹೊರತು ಸೋಮಾರಿಯ ಸೊತ್ತಲ್ಲ ಎಂದು ಅವರು ಪ್ರತಿಪಾದಿಸಿದರು.

ಸಾಧನೆಯತ್ತ ಗುರಿ ಇರಬೇಕು. ಜೀವನದ ಯಶಸ್ಸಿನ ಗುಟ್ಟಿರುವುದೇ ಏಕಾಗ್ರತೆಯಲ್ಲಿ. ವಿದ್ಯಾರ್ಥಿಗಳು ತಮ್ಮಲ್ಲಿರುವ ಚಂಚಲತೆಯನ್ನು ಬಿಟ್ಟು ಏಕಾಗ್ರತೆ ಮತ್ತು ಪ್ರಾಮಾಣಿಕ ಪ್ರಯತ್ನದಿಂದ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯವಿದೆ ಎಂದು ಹೇಳಿದರು.

ವಿದ್ಯೆ ಸುವಿಶಾಲ ಸಾಗರ, ಅದನ್ನು ಈಜಿದವನಿಗೇ ಗೊತ್ತು ಅದರ ಆಳ ಮತ್ತು ಅಗಲ ಎಷ್ಟೆಂದು. ವಿದ್ಯೆ ಯಾರೂ ಕದಿಯಲಾಗದ ಸಂಪತ್ತು. ವಿದ್ಯೆ ಮತ್ತು ಬುದ್ದಿಗೆ ಸಂಪತ್ತಿಗಿಂತ ಹೆಚ್ಚು ಬೆಲೆ ಇದೆ ಎಂದರು.

ಇತ್ತೀಚಿನ ದಿನಗಳಲ್ಲಿ ಸಮಯ ಪ್ರಜ್ಞೆ ಕಡಿಮೆಯಾಗುತ್ತಿದ್ದು, ಮೌಲ್ಯರಹಿತ ಜೀವನ, ಚಂಚಲತೆ ಹೆಚ್ಚಾಗುತ್ತಿದೆ. ವಿದ್ಯಾರ್ಥಿಗಳು ಕೀಳರಿಮೆ ಬಿಟ್ಟು ಆತ್ಮವಿಶ್ವಾಸವನ್ನು ಮತ್ತು ಬುದ್ದಿ ಜೊತೆಗೆ ಭಾವನೆಯನ್ನೂ ಸಹ ಬೆಳೆಸಿಕೊಳ್ಳುವಂತೆ ಸಲಹೆ ನೀಡಿದರು.

ಕೇವಲ ಪಠ್ಯಕ್ಕೆ ಸೀಮಿತವಾಗದೇ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಸಾಹಿತ್ಯಿಕ ಬರವಣಿಗೆ ಮತ್ತು ಮಾನವೀಯ ಮೌಲ್ಯಗಳನ್ನು ರೂಢಿಸಿಕೊಳ್ಳುವಂತೆ ಕರೆ ನೀಡಿದರು.

ಶ್ರೀ ವಿನಾಯಕ ಎಜುಕೇಶನ್ ಟ್ರಸ್ಟ್ ಕಾರ್ಯದರ್ಶಿ ಎನ್.ಎ. ಮುರುಗೇಶ್ ಮಾತನಾಡಿ, ವಿದ್ಯಾರ್ಥಿ ದೆಸೆಯಲ್ಲಿಯೇ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳುವ ಸದುದ್ಧೇಶದಿಂದ ವಿದ್ಯಾರ್ಥಿ ಸಂಘಗಳನ್ನು ರಚಿಸಲಾಗುತ್ತದೆ. ತನ್ಮೂಲಕ ಸಂಘಟನಾತ್ಮಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ವಿದ್ಯಾರ್ಥಿ ಸಂಘ ಸಹಕಾರಿಯಾಗಲಿದೆ ಎಂದರು.

ವಿಶ್ವದ ಎಲ್ಲಾ ರಾಷ್ಟ್ರಗಳಿಗಿಂತ ಭಾರತದ ಯುವ ಶಕ್ತಿ ಬಲಿಷ್ಠವಾದುದು. ಭಾರತೀಯರು ವಿದೇಶಗಳಲ್ಲೂ ತಮ್ಮ ಪ್ರಾಬಲ್ಯ ತೋರಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲು ಮೇಲುಗೈ ಸಾಧಿಸಿದ ಉದಾಹರಣೆಗಳು ನಮ್ಮ ಕಣ್ಮುಂದೆ ಇವೆ.ವಿದ್ಯಾರ್ಥಿ ಜೀವನ ಪ್ರಮುಖ ಘಟ್ಟ. ಈ ಹಂತದಲ್ಲಿ ತಮ್ಮ ಜವಾಬ್ದಾರಿಯನ್ನು ಅರಿತು ನಿರ್ಣಯ ಕೈಗೊಳ್ಳಬೇಕಾಗುತ್ತದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಭತ್ತ ತುಂಬುವ ಚೀಲಗಳಾಗದೇ ಭತ್ತ ಬೆಳೆಯುವ ಗದ್ದೆಗಳಾಗಬೇಕು. ವಿದ್ಯಾರ್ಥಿಗಳು ಕಾಲೇಜಿಗೆ ಕೀರ್ತಿ ತರುವ ನಿಟ್ಟಿನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮಾಡುವಂತೆ ಹಿತ ನುಡಿದರು.

ಇದೇ ವೇಳೆ ಕರ್ನಾಟಕ ರತ್ನ ದಿ. ಪುನೀತ್ ರಾಜ್‌ಕುಮಾರ್ ಅವರಿಗೆ ನಮನ ಸಲ್ಲಿಸಲಾಯಿತು. ದ್ವಿತೀಯ ಪಿಯುಸಿ ಸಾಧಕರನ್ನು ಗೌರವಿಸಲಾಯಿತು.

ವಿನಾಯಕ ಎಜುಕೇಶನ್ ಟ್ರಸ್ಟ್‌ನ ಅಥಣಿ ಪ್ರಶಾಂತ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲರಾದ ಡಾ. ಕೆ. ಷಣ್ಮುಖ, ಎಂ.ಸಿ. ಗುರು, ಶ್ರೀಮತಿ ಡಯಾನಾ ದಿವ್ಯ ಉಪಸ್ಥಿತರಿದ್ದರು.

ರಕ್ಷಿತಾ ಸ್ವಾಗತ ನೃತ್ಯ ಮಾಡಿದರು. ಕೀರ್ತನಾ ಸ್ವಾಗತಿಸಿದರು. ವಸುಂಧರಾ ಜವಳಿ ವಂದಿಸಿದರು. ಭೂಮಿಕಾ ನಾಡಿಗೇರ್ ಹಾಗೂ ವೈಷ್ಣವಿ ನಿರೂಪಿಸಿದರು.

# ವಾಲ್ಮೀಕಿ ಸಮಾಜಕ್ಕೂ ನಮ್ಮ ಮನೆತನಕ್ಕೂ ಅವಿನಾಭಾವ ಸಂಬಂಧವಿದೆ: ಪಾಟೀಲ್



ಮಲೇಬೆನ್ನೂರು, ಆ. 24- ನಮ್ಮ ಮನೆತನಕ್ಕೂ, ವಾಲ್ಮೀಕಿ ನಾಯಕ ಸಮಾಜಕ್ಕೂ ಅವಿನಾಭಾವ ಸಂಬಂಧವಿದ್ದು, ಈ ಸಮಾಜದ ಹಿತ ಕಾಯಲು ಬದ್ಧವಿರುವುದಾಗಿ ಕೆಪಿಸಿಸಿ ಪ್ರಚಾರ ಸಮಿತಿಯ ನೂತನ ಅಧ್ಯಕ್ಷರೂ ಆದ ಮಾಜಿ ಸಚಿವ ಎಂ.ಬಿ. ಪಾಟೀಲ್ ಹೇಳಿದರು.

ರಾಜನಹಳ್ಳಿಯ ವಾಲ್ಮೀಕಿ ಗುರುಪೀಠಕ್ಕೆ ಮೊನ್ನೆ ಆಗಮಿಸಿ, ಲಿಂಗೈಕ್ಯ ಶ್ರೀ ಪುಣ್ಯಾನಂದಪುರಿ ಸ್ವಾಮೀಜಿ ಅವರ ಗದ್ದುಗೆಗೆ ಪೂಜೆ ಸಲ್ಲಿಸಿದ ನಂತರ, ಶ್ರೀಮಠದಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಹೋರಾಟದಲ್ಲೂ ವಾಲ್ಮೀಕಿ-ನಾಯಕ ಸಮಾಜದ ಕೊಡುಗೆ ಇದ್ದು, ಸುರಪುರ ಮತ್ತು ಹಲಗಲಿ ನಾಯಕರ ಹೋರಾಟ, ಪ್ರಾಣ ತ್ಯಾಗ ಅವಿಸ್ಮರಣೀಯವಾಗಿದೆ.

ಅಷ್ಟೇ ಅಲ್ಲ ಚಿತ್ರದುರ್ಗ ಮದಕರಿ ನಾಯಕರ ಕೊಡುಗೆಯೂ ಅಪಾರವಾಗಿದೆ. ಜೊತೆಗೆ ಜಗತ್ತಿಗೇ ಸಂಪೂರ್ಣ ರಾಮಾಯಣ ಎಂಬ ಶ್ರೇಷ್ಠ ಗ್ರಂಥ ನೀಡಿರುವ ಆದಿಕವಿ ವಾಲ್ಮೀಕಿ ಅವರು ಈ ಸಮಾಜದ ಅಸ್ಮಿತೆ ಆಗಿದ್ದಾರೆ.

ಕಳೆದ 193 ದಿನಗಳಿಂದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಶ್ರೀಗಳು ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳಕ್ಕಾಗಿ ಆಗ್ರಹಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದು, ಈ ಹೋರಾಟಕ್ಕೆ ಕಾಂಗ್ರೆಸ್ ಪಕ್ಷದ ಸಂಪೂರ್ಣ ಬೆಂಬಲವಿದೆ. ಶ್ರೀಗಳು 6 ತಿಂಗಳಿಂದ ಧರಣಿ ಕುಳಿತುಕೊಳ್ಳುವಂತೆ ಮಾಡಿರುವ ಬಿಜೆಪಿ ಸರ್ಕಾರಕ್ಕೆ ಸ್ವಲ್ಪವೂ ಕನಿಕರ ಇಲ್ಲವೆಂದು ಎಂ.ಬಿ. ಪಾಟೀಲ್ ಆಕ್ರೋಶ ವ್ಯಕ್ತಪಡಿಸಿದರು.

ಮಠದ ಆಡಳಿತಾಧಿಕಾರಿ ಟಿ. ಓಬಳಪ್ಪ, ಜಗಳೂರು ಕ್ಷೇತ್ರದ ಮುಖಂಡ ದೇವೇಂದ್ರಪ್ಪ ಮಾತನಾಡಿದರು.

ಜಿ.ಪಂ. ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್. ಬಿ. ಹನುಮಂತಪ್ಪ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪಾರ್ವತಿ, ಗ್ರಾ.ಪಂ. ಅಧ್ಯಕ್ಷೆ ಚೈತ್ರಾ ಲಂಕೇಶ್, ತಾ.ಪಂ. ಮಾಜಿ ಸದಸ್ಯ ಬೆಳ್ಳೂಡಿ ಬಸವರಾಜ್, ಗುತ್ತೂರು ಹಾಲೇಶ್‌ಗೌಡ, ದೇವರಬೆಳಕೆರೆ ಮಹೇಶ್ವರಪ್ಪ, ರಾಜನಹಳ್ಳಿ ಭೀಮಣ್ಣ, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸು, ವಕೀಲ ಸುಭಾಶ್‌ಚಂದ್ರ ಬೋಸ್, ಹರಿಹರ ಹಬೀಬ್, ಬಾವಿಕಟ್ಟೆ ಕರಿಬಸಪ್ಪ, ತಿಪ್ಪೇಶ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಉಪಸ್ಥಿತರಿದ್ದರು.

## ಯುಪಿಎಸ್‌ಸಿ: ಒಂದೇ ಬಾರಿ ವಿವರ ಸಲ್ಲಿಕೆ ಪದ್ಧತಿ ಜಾರಿ

(1ನೇ ಪುಟದಿಂದ) ಕಾಂಕ್ಷಿಗಳು ಒಂದು ಬಾರಿ ಮಾತ್ರ ಸ್ವವಿವರಗಳನ್ನು ದಾಖಲಿಸಬೇಕು. ಪ್ರತಿ ಬಾರಿ ಪರೀಕ್ಷೆ ಬರೆಯುವಾಗ ಒಟಿಆರ್ ಮಾಹಿತಿ ನೀಡಿದಾಗ ಉಳಿದ ವಿವರಗಳು ತಾವಾಗಿಯೇ ಲಭ್ಯವಾಗುತ್ತವೆ. ಇದರಿಂದಾಗಿ ಅರ್ಜಿಗಳ ಭರ್ತಿ ಸುಲಭವಾಗುವ ಜೊತೆಗೆ, ವಿವರ ತುಂಬುವಾಗ ತಪ್ಪಾಗುವ ಸಮಸ್ಯೆಯೂ ನಿವಾರಣೆಯಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಹರಿಹರ: ಪಿಓಪಿ ಗಣೇಶ ಮೂರ್ತಿ ಮಾರಾಟ ತಡೆಗೆ ಕುಂಬಾರ ಯುವ ಸೈನ್ಯ ಮನವಿ



ಹರಿಹರ,ಆ.24- ಪಿಓಪಿ ಗಣಪತಿಗಳನ್ನು ನಗರದ ಕೆಲವೊಂದು ಮಳಿಗೆಯಲ್ಲಿ ಇಟ್ಟುಕೊಂಡು ಕಡಿಮೆ ಬೆಲೆಗೆ ರಾಜಾ ರೋಷವಾಗಿ ಮಾರುತ್ತಿದ್ದಾರೆ. ಇದಕ್ಕೆ ಅವಕಾಶ ಕೊಡಬಾರದು ಎಂದು ಕುಂಬಾರ ಯುವ ಸೈನ್ಯದ ಕಾರ್ಯಕರ್ತರು ನಗರಸಭೆಗೆ ಮನವಿ ಮಾಡಿದ್ದಾರೆ.

ಕುಂಬಾರ ಜನಾಂಗದವರು ಬಹಳ ವರ್ಷಗಳಿಂದ ಮಣ್ಣಿನ ಗಣೇಶನ ಮೂರ್ತಿಗಳನ್ನು ತಯಾರು ಮಾಡುತ್ತಾ ಬಂದಿದ್ದಾರೆ. ಕಳೆದ ಎರಡು, ಮೂರು ವರ್ಷಗಳಿಂದ ಕೊರೊನಾ ಹೆಮ್ಮಾರಿ ರೋಗದಿಂದ ನಮ್ಮ ಜೀವನ ಬಹಳ ಕಷ್ಟಕರವಾಗಿತ್ತು. ಈ ವರ್ಷ ಯಾವುದೇ ವಿಘ್ನವಿಲ್ಲದ್ದರಿಂದ ನಾವು ಅತಿ ಹೆಚ್ಚು ಮಣ್ಣಿನ ಗಣೇಶನ ಮೂರ್ತಿಗಳನ್ನು ತಯಾರು ಮಾಡಿದ್ದೇವೆ. ಮಣ್ಣಿನ ಮೂರ್ತಿಗಳಿಂದ ಪರಿಸರಕ್ಕೆ ಯಾವುದೇ ತೊಂದರೆ ಆಗುವುದಿಲ್ಲ ಎಂದರು.

ತಾಲ್ಲೂಕು ಕುಂಬಾರ ಯುವ ಸೈನ್ಯದ ಅಧ್ಯಕ್ಷ ಚಂದ್ರಶೇಖರ್ ಕುಂಬಾರ ಮಾತನಾಡಿ, ನಮ್ಮ ಕುಂಬಾರ ಜನಾಂಗದವರು ಮಾಡಿದ ಮಣ್ಣಿನ ಗಣಪತಿಗೆ ಅತಿ ಹೆಚ್ಚು ಬೇಡಿಕೆ ಇರುವುದರಿಂದ ಇದನ್ನೇ ನಂಬಿಕೊಂಡು ಕೆಲವು ಕುಟುಂಬಗಳು ಜೀವನ ಸಾಗಿಸುತ್ತಿವೆ. ಆದ್ದರಿಂದ ಪಿಓಪಿ ಗಣೇಶನ ಮೂರ್ತಿಗಳನ್ನು ಮಾರುವುದಕ್ಕೆ ಅವಕಾಶ ಮಾಡಿಕೊಡಬಾರದು ಎಂದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷರಾದ ವೀರೇಶ್ ಕುಂಬಾರ್, ಮಲ್ಲಿಕಾರ್ಜುನ ಕುಂಬಾರ್, ಸಂದಿ ಮನಿ ಮಲ್ಲಿಕಾರ್ಜುನ್, ಬಾಬು ಕುಂಬಾರ್, ಮಂಜುನಾಥ್ ಕುಂಬಾರ್, ಮಲ್ಲೇಶ್ ಕುಂಬಾರ್, ನಾಗರಾಜ್ ಕುಂಬಾರ್, ಆನಂದ್ ಕುಂಬಾರ್, ಸಮಾಜದ ಹಿರಿಯ ಮುಖಂಡರಾದ ಬಸಪ್ಪ ಕುಂಬಾರ್, ಶಂಕ್ರಪ್ಪ ಕುಂಬಾರ್, ಕರಿಬಸಪ್ಪ ಕುಂಬಾರ್, ವಾಗೀಶ್ ಕುಂಬಾರ್ ಭಾಗವಹಿಸಿದ್ದರು.

# ನಂದಿಗುಡಿ ಮಠಕ್ಕೆ ಎಂ.ಬಿ. ಪಾಟೀಲ್

ಮಲೇಬೆನ್ನೂರು, ಆ. 24- ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಮಾಜಿ ಸಚಿವ ಎಂ.ಬಿ. ಪಾಟೀಲ್ ಅವರು ಭಾನುವಾರ ಸಂಜೆ ನಂದಿಗುಡಿ ಬೃಹನ್ಮಠಕ್ಕೆ ಆಗಮಿಸಿ, ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಆಶೀರ್ವಾದ ಪಡೆದುಕೊಂಡರು.

ಈ ವೇಳೆ ಮಾತನಾಡಿದ ಎಂ.ಬಿ. ಪಾಟೀಲ್ ಅವರು, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ನಂತರ ರಾಜ್ಯ ಪ್ರವಾಸ ಕೈಗೊಂಡಿದ್ದು, ಎಲ್ಲಾ ಧರ್ಮದ ಗುರುಗಳನ್ನು ಭೇಟಿ ಮಾಡಿ ಆಶೀರ್ವಾದ ಪಡೆದುಕೊಳ್ಳುತ್ತಿದ್ದೇನೆ. ಮಠ-ಮಾನ್ಯಗಳ ಬಗ್ಗೆ ವಿಶೇಷ ಗೌರವವಿದ್ದು, ಪಾಲಿಸುವುದಾಗಿ ಪಾಟೀಲ್ ತಿಳಿಸಿದರು.



ನಂದಿ ಸೌಹಾರ್ದ ಸಹಕಾರಿ ಅಧ್ಯಕ್ಷ ಜಿಗಳಿ ಇಂದೂಧರ್ ಮಾತನಾಡಿ, ತಾವು ನೀರಾವರಿ ಸಚಿವರಾಗಿದ್ದಾಗ ಉಕ್ಕಡಗಾತ್ರಿ ಬಳಿ ತುಂಗಭದ್ರಾ ನದಿಗೆ ತಡೆಗೋಡೆ ಕಟ್ಟಲು ಅನುದಾನ ನೀಡಿದ್ದನ್ನು ಸ್ಮರಿಸಿ, ಕೃತಜ್ಞತೆ ಸಲ್ಲಿಸಿ, ಉಕ್ಕಡಗಾತ್ರಿಗೆ ಬರುವಂತೆ ಆಹ್ವಾನ ನೀಡಿದರು.

ವಕೀಲ ನಂದಿತಾವರೆ ತಿಮ್ಮನಗೌಡ ಮಾತನಾಡಿ, ರಾಜ್ಯದಲ್ಲಿ ಮುಂದಿನ ವರ್ಷ ಕಾಂಗ್ರೆಸ್ ಸರ್ಕಾರ ಬರುವುದು ನಿಶ್ಚಿತವಾಗಿದ್ದು, ಹರಿಹರ ತಾಲ್ಲೂಕಿನಲ್ಲಿ ಹದಗೆಟ್ಟಿರುವ ರಸ್ತೆಗಳ ಅಭಿವೃದ್ಧಿಗೆ ಒತ್ತು ಕೊಡಿ ಎಂದು ಪಾಟೀಲ್ ಅವರ ಗಮನಕ್ಕೆ ತಂದರು.

ಜಿ.ಪಂ. ಮಾಜಿ ಸದಸ್ಯ ಹಾಗೂ ವಕೀಲ ಎಂ. ನಾಗೇಂದ್ರಪ್ಪ ಮಾತನಾಡಿ, ಎಂ.ಬಿ. ಪಾಟೀಲ್ ಅವರು, ನೀರಾವರಿ ಸಚಿವರಾಗಿದ್ದಾಗ ಮಾಡಿದ ಕೆಲಸಗಳ ಬಗ್ಗೆ ತಿಳಿಸಿ, ಹರಿಹರ ಕ್ಷೇತ್ರದ ಕಾಳಜಿ ವಹಿಸುವಂತೆ ಕೋರಿದರು.

ಹಿರಿಯರಾದ ಡಾ. ಟಿ. ಬಸವರಾಜ್ ಅವರು ಎಂ.ಬಿ. ಪಾಟೀಲ್ ಅವರಿಗೆ ಶುಭ ಕೋರಿದರು. ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಕಾಂಗ್ರೆಸ್ ಮುಖಂಡ ಜಗಳೂರು ದೇವೇಂದ್ರಪ್ಪ, ಗುತ್ತೂರು ಹಾಲೇಶಗೌಡ, ಟಿ.ಜೆ. ಮುರುಗೇಶ್, ಉಕ್ಕಡಗಾತ್ರಿ ದೇವಸ್ಥಾನ ಟ್ರಸ್ಟ್ ಕಾರ್ಯದರ್ಶಿ ಸುರೇಶ್, ಹಿಂಡಸಘಟ್ಟಿ ಮುರುಗೇಶಪ್ಪ, ವಾಸನ ಬಸವರಾಜಪ್ಪ, ನಂದತಾವರೆ ಮುರುಗೇಂದ್ರಯ್ಯ, ಹಳ್ಳಿಹಾಳ್ ವೀರನಗೌಡ, ಮಲ್ಲನಗೌಡ, ದೇವರಬೆಳಕೆರೆ ಮಹೇಶ್ವರಪ್ಪ, ಗೋವಿನಹಾಳ್ ಬಸವಲಿಂಗಪ್ಪಗೌಡ, ಹಿಂಡಸಘಟ್ಟಿ ತಿಪ್ಪೇಶ್ ಈ ವೇಳೆ ಹಾಜರಿದ್ದರು.

# ಶ್ರೀಕೃಷ್ಣ, ರಾಧೆಯರ ವೇಷಭೂಷಣ ಸ್ಪರ್ಧೆ



ದಾವಣಗೆರೆ, ಆ.24- ಜ್ಞಾನ ಸೌರಭ ಕಲ್ಚರಲ್ ಮತ್ತು ಎಜುಕೇಶನಲ್ ಟ್ರಸ್ಟ್ ವತಿಯಿಂದ ಲಯನ್ಸ್ ಕ್ಲಬ್ ಸಹಯೋಗದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಈಚೆಗೆ ಶ್ರೀಕೃಷ್ಣ ಹಾಗೂ ರಾಧೆಯರ ವೇಷಭೂಷಣ ಸ್ಪರ್ಧೆ ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ನೂರಾರು ಮಕ್ಕಳು ಭಾಗವಹಿಸಿದ್ದರು. ವಿಜೇತ ಮಕ್ಕಳಿಗೆ ಪ್ರಥಮ, ದ್ವಿತೀಯ ಬಹುಮಾನವಾಗಿ ಬೆಳ್ಳಿ ನಾಣ್ಯಗಳನ್ನು ಹಾಗೂ ಭಾಗವಹಿಸಿದ್ದ ಎಲ್ಲಾ ಮಕ್ಕಳಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು. ಈ ಸಂದರ್ಭದಲ್ಲಿ ಲಯನ್ಸ್ ಕ್ಲಬ್ ಅಧ್ಯಕ್ಷ ಎನ್.ಆರ್. ನಾಗಭೂಷಣರಾವ್, ಟ್ರಸ್ಟಿನ ಅಧ್ಯಕ್ಷ ಡಿ. ಮಹೇಶ್ವರಪ್ಪ, ಸಿ.ಆರ್.ಪಿ. ಭರತ್, ಟ್ರಸ್ಟಿನ ಕಾರ್ಯದರ್ಶಿ ಪುಷ್ಪಾ ಮಹೇಶ್, ಹೆಚ್.ಎಸ್. ರಾಜಶೇಖರ್ ಭಾಗವಹಿಸಿದ್ದರು. ತೀರ್ಪುಗಾರರಾಗಿ ಶ್ರೀಕಾಂತ್ ಭಟ್, ಪ್ರಿಯಾಂಕ ಧೂಳೆಹೊಳೆ ಇದ್ದರು.

# ಉಚಿತ ಕೊಡುಗೆಗಳ ಬಗ್ಗೆ ಕೋರ್ಟ್ ನಿರ್ಧರಿಸಬಾರದು : ಮಾಜಿ ಉಪ ರಾಷ್ಟ್ರಪತಿ ನಾಯ್ಡು

ನವದೆಹಲಿ, ಆ. 24 – ಉಚಿತ ಕೊಡುಗೆಗಳ ವಿಷಯವನ್ನು ಚುನಾಯಿತ ಪ್ರತಿನಿಧಿಗಳು ನಿರ್ಧರಿಸಬೇಕೇ ವಿನಹ ಸುಪ್ರೀಂ ಕೋರ್ಟ್ ಇಲ್ಲವೇ ನ್ಯಾಯಾಂಗ ಅಲ್ಲ ಎಂದು ಮಾಜಿ ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಹೇಳಿದ್ದಾರೆ.

ಪುಸ್ತಕ ಬಿಡುಗಡೆ ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಿದ್ದ ಅವರು, ಪಕ್ಷಾಂತರ ಹಾಗೂ ಉಚಿತ ಕೊಡುಗೆಗಳ ವಿಷಯಗಳಿಗೆ ಸಂಬಂಧಿಸಿದಂತೆ ಕೆಲವರು ಕೋರ್ಟ್ ಮೊರೆ ಹೋಗಿದ್ದಾರೆ. ಕಾನೂನು ವ್ಯಾಖ್ಯಾನಕ್ಕಾಗಿ ನ್ಯಾಯಾಲಯದ ಮೊರೆ ಹೋಗಬಹುದು. ಆದರೆ, ಯಾವ ನೀತಿಗಳನ್ನು ರೂಪಿಸಬೇಕು ಎಂಬುದು ಸಂಸತ್ತು ಹಾಗೂ ರಾಜಕೀಯ ಪಕ್ಷಗಳಿಗೆ ಸೇರಿದ ವಿಷಯ ಎಂದು ನಾಯ್ಡು ತಿಳಿಸಿದ್ದಾರೆ.

ಜನರಿಂದ ಚುನಾಯಿತರಾದವರು ಉಚಿತ ಕೊಡುಗೆಗಳ ವಿಷಯ ನಿರ್ಧರಿಸಬೇಕು. ಈ ಬಗ್ಗೆ ಸುಪ್ರೀಂ ಕೋರ್ಟ್ ಇಲ್ಲವೇ ನ್ಯಾಯಾಂಗ ನಿರ್ಧರಿಸಬಾರದು ಎಂದವರು ಹೇಳಿದ್ದಾರೆ.

ಉಚಿತ ಕೊಡುಗೆ ಎಂದರೆ ಏನು ಎಂಬುದನ್ನು ಮೊದಲು ನಿರ್ಧರಿಸಬೇಕಿದೆ. ಭರವಸೆಗಳನ್ನು ನೀಡುವಾಗ ರಾಜ್ಯಗಳು ಹಾಗೂ ಕೇಂದ್ರಗಳ ಹಣಕಾಸು ಸ್ಥಿತಿ ಪರಿಗಣಿಸಬೇಕಾಗುತ್ತದೆ. ಈ ಬಗ್ಗೆ ವ್ಯಾಪಕ ಚರ್ಚೆಯ ನಂತರ ನಿರ್ಧಾರ ಸಾಧ್ಯ ಎಂದವರು ಹೇಳಿದ್ದಾರೆ. ಆದರೆ, ಬಜೆಟ್‌ನಲ್ಲಿ ಅವಕಾಶ ಇಲ್ಲದ ಮತ್ತು ಆರ್ಥಿಕತೆಯಲ್ಲಿ ಸಾಮರ್ಥ್ಯ ಇಲ್ಲದಾಗ ಉಚಿತ ಕೊಡುಗೆಗಳನ್ನು ಕೊಡಬಾರದು ಎಂದವರು ಅಭಿಪ್ರಾಯ ಪಟ್ಟಿದ್ದಾರೆ.

# ರೈಲ್ವೆ ಹಗರಣ : ತೇಜಸ್ವಿ ಯಾದವ್‌ಗೆ ಸಂಬಂಧಿಸಿದ ತಾಣದ ಮೇಲೆ ಸಿಬಿಐ ದಾಳಿ


ನವದೆಹಲಿ, ಆ. 24 – 14 ವರ್ಷಗಳ ಹಳೆಯ ರೈಲ್ವೆ ಉದ್ಯೋಗ ಹಗರಣಕ್ಕೆ ಸಂಬಂಧಿಸಿದಂತೆ 27 ತಾಣಗಳ ಮೇಲೆ ಸಿ.ಬಿ.ಐ. ದಾಳಿ ನಡೆಸಿದೆ. ಇದರಲ್ಲಿ ಗುರುಗ್ರಾಮದಲ್ಲಿ ನಿರ್ಮಾಣ ಹಂತದಲ್ಲಿರುವ ಮಾಲ್ ಸಹ ಸೇರಿದ್ದು, ಇದು ಬಿಹಾರದ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರಿಗೆ ಸಂಬಂಧಿಸಿದ್ದು ಎನ್ನಲಾಗುತ್ತಿದೆ.

ಬಿಹಾರ ಹಾಗೂ ದೆಹಲಿಯ ಹಲವೆಡೆ ದಾಳಿ ನಡೆಸಲಾಗಿದೆ. ಆರ್.ಜೆ.ಡಿ. ರಾಜ್ಯಸಭಾ ಸದಸ್ಯರು ಹಾಗೂ ಇತರರ ನಿವಾಸಗಳ ಮೇಲೂ ದಾಳಿ ನಡೆಸಲಾಗಿದೆ. ಬಿಹಾರದಲ್ಲಿ ಜೆಡಿಯು, ಆರ್‌ಜೆಡಿ, ಕಾಂಗ್ರೆಸ್, ಎಡಪಕ್ಷಗಳು ಹಾಗೂ ಇತರೆ ಪಕ್ಷಗಳ ಮೈತ್ರಿ ಸರ್ಕಾರ ಬಹುಮತ ಸಾಬೀತು ಪಡಿಸುವ ಕೆಲವೇ ಗಂಟೆಗಳ ಮುಂಚೆ ದಾಳಿ ನಡೆಸಲಾಗಿದೆ.

ಆದರೆ, ಈ ಮಾಲ್‌ಗೂ ತಮಗೂ ಸಂಬಂಧ ಇಲ್ಲ ಎಂದಿರುವ ಯಾದವ್, ಇದನ್ನು ಬಿಜೆಪಿ ಸಂಸದರೊಬ್ಬರು ಉದ್ಘಾಟಿಸಿದ್ದರು ಎಂದಿದ್ದಾರೆ.

# ದಾರಿ ಬಿಟ್ಟವರನ್ನು ಸರಿ ದಾರಿಗೆ ತರುವುದೇ 'ಮತ್ತೆ ಕಲ್ಯಾಣ'

## ಚಿಕ್ಕೂರು ಕಾರ್ಯಕ್ರಮದಲ್ಲಿ ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ



ಅರಸೀಕೆರೆ, ಆ. 24- ಮಾಡುವ ಕೆಲಸ ತನಗೂ ಸಮಾಜಕ್ಕೂ ಹಿತವನ್ನುಂಟು ಮಾಡುವುದಾದರೆ ಅದೇ ಕಾಯಕ. ಅದು ಸತ್ಯಶುದ್ಧವಾಗಿರಬೇಕು ಎಂದು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನುಡಿದರು.

ಇಲ್ಲಿನ ಮತ್ತೆ ಕಲ್ಯಾಣ ಸಮಿತಿ – ಚಿಕ್ಕೂರು ಮತ್ತು ಸಾಣೇಹಳ್ಳಿ ಶ್ರೀ ತರಳಬಾಳು ಜಗದ್ಗುರು ಶಾಖಾಮಠದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಮತ್ತೆ ಕಲ್ಯಾಣ' ಕಾರ್ಯಕ್ರಮದ ನೇತೃತ್ವ ವಹಿಸಿ ಅವರು ಮಾತನಾಡಿದರು.

ಬಾಹ್ಯ ವೇಷಭೂಷಗಳಿಂದ ಶರಣನಾಗಲು ಸಾಧ್ಯವಿಲ್ಲ. ಪ್ರಾಮಾಣಿಕತೆ, ಸತ್ಯವನ್ನು ನುಡಿಯುವ, ಎಲ್ಲರಿಗೂ ಒಳಿತನ್ನು ಬಯಸುವ, ಪರರ ಹಿತ ಬಯಸುವ, ನೋಡಿದ್ದೆಲ್ಲ ತನಗೇ ಬೇಕೆನ್ನುವ ಆಸೆಯನ್ನು ನಿಯಂತ್ರಿಸಿಕೊಳ್ಳುವವನೇ ಶರಣ.

ಈ ಹಿನ್ನೆಲೆಯಲ್ಲಿ ನಮ್ಮನ್ನು ನಾವೇ ಆತ್ಮಾವಲೋಕನ ಮಾಡಿಕೊಂಡರೆ, ನಮ್ಮಲ್ಲಿ ಎಷ್ಟು ಜನ ಶರಣರಿದ್ದೇವೆ?. ಪಂಚೇಂದ್ರಿಯಗಳ ಲಂಪಟತನದಿಂದ ಮುಕ್ತನಾದವ, ಇಷ್ಟಲಿಂಗ ತೋರಿದ ದಾರಿಯಲ್ಲಿ ನಡೆಯುವವ ಶರಣ. ಲಿಂಗ ಬೇರೆಯಲ್ಲ; ಶರಣ ಬೇರೆಯಲ್ಲ. ಬಸವಣ್ಣ 'ಶರಣರು ಸರ್ವಾಂಗಲಿಂಗಿಗಳು' ಎನ್ನುವರು. ಅವರು ದೇಹವನ್ನೇ ದೇವಾಲಯ ಮಾಡಿಕೊಂಡವರು. ಇವುಗಳನ್ನೆಲ್ಲ ಕೇಳಿದರೆ ಹೀಗೆ ಇರಲು ಸಾಧ್ಯವೇ ಎನ್ನುವ ಪ್ರಶ್ನೆ ಯಾರನ್ನಾದರೂ ಕಾಡುವುದು. ಆದರೆ 12ನೇ ಶತಮಾನದ ಸಾಮಾನ್ಯರಾದ ಮೇದಾರ ಕೇತಯ್ಯ, ನುಲಿಯ ಚಂದಯ್ಯ, ಕನ್ನದ ಮಾರಯ್ಯ, ಸೂಳೆ ಸಂಕವ್ವೆ, ಹೆಂಡದ ಮಾರಯ್ಯ, ಆಯ್ದಕ್ಕಿ ಲಕ್ಕಮ್ಮ ಮೊದಲಾದ ಶರಣ-ಶರಣೆಯರು ನಿಜವಾಗಿಯೂ ಹಾಗೆಯೇ ನಡೆದುಕೊಂಡು ಶರಣರಾದರು.

ಇದು ಅವರ ಬದುಕು-ಬರಹಗಳಿಂದ ನಮಗೆ ತಿಳಿದು ಬರುವುದು. ಅವರಿಗೆ ಸಾಧ್ಯವಾದದ್ದು ನಮಗೆ ಏಕೆ ಸಾಧ್ಯವಿಲ್ಲ ಎನ್ನುವ ಪ್ರಶ್ನೆಯನ್ನು ನಮಗೆ ನಾವೇ ಹಾಕಿಕೊಳ್ಳಬೇಕು.

ಈಗಲೂ ನಮ್ಮ ಮಧ್ಯೆ ಎಲೆ ಮರೆಯ ಕಾಯಂತೆ ಸಜ್ಜನರಿದ್ದರೆ. ಅವರನ್ನು ಗುರುತಿಸಿ ಅವರ ಸಂಗ ಬೆಳೆಸಿಕೊಳ್ಳಬೇಕು. ಅಕ್ಕಮಹಾದೇವಿ ಅತ್ಯಂತ ಕಿರಿಯಳಾದರೂ ಹಿರಿಯರಾದ ಅಲ್ಲಮ 'ಅಕ್ಕನ ಪಾದಕ್ಕೆ ನಮೋ ನಮೋ' ಎನ್ನುವರು. ಹೀಗೆ ಹಿರಿದು-ಕಿರಿದೆನ್ನುವ ಭಾವನೆಗಳನ್ನು ಬಿಟ್ಟು, ಮರೆವನ್ನು ಕಳೆದು ಅರಿವನ್ನು ಅಳವಡಿಸಿಕೊಂಡವನೇ ಶರಣನಾಗುವನು. ಮನೆಯಿಂದ ಶ್ರೀಮಂತರಾಗದೆ ಮನಸ್ಸಿನಿಂದ ಶ್ರೀಮಂತರಾಗಬೇಕು. ದಾರಿ ಬಿಟ್ಟವರನ್ನು ಸರಿ ದಾರಿಗೆ ಕರೆದುಕೊಂಡು ಬರುವುದೇ 'ಮತ್ತೆ ಕಲ್ಯಾಣದ' ಉದ್ದೇಶ ಎಂದರು.

ಸಾನ್ನಿಧ್ಯ ವಹಿಸಿದ್ದ ಅರಸೀಕೆರೆಯ ಮೂರು ಕಳಸದ ಮಠದ ಶ್ರೀ ಜ್ಞಾನಪ್ರಭು ಸಿದ್ಧರಾಮ ದೇಶೀಕೇಂದ್ರ ಮಹಾ ಸ್ವಾಮೀಜಿ ಮಾತನಾಡಿ, ಬೇಕು-ಬೇಡೆಂಬುವುಗಳನ್ನು ಅತಿಗಳಿದಾತನೇ ಶರಣ. ಒಳ್ಳೆಯ, ಸದಾಶಯದ ಮಾತುಗಳನ್ನು ಕೇಳುವುದಷ್ಟೇ ಅಲ್ಲ; ಕೇಳಿದ್ದನ್ನು ಅರಗಿಸಿಕೊಂಡು, ಅಳವಡಿಸಿಕೊಳ್ಳುವ ಸಂಸ್ಕಾರ ಬೆಳೆಸಿಕೊಳ್ಳಬೇಕು. ಆಸೆಗೆ ಮಿತಿಯಿಲ್ಲ. ಆಸೆಗೆ ಮಿತಿಯನ್ನು ಹಾಕಿಕೊಳ್ಳುವ ಸಂಕಲ್ಪವನ್ನು ಶರಣರ ಸಂಗ ಕಲಿಸಿಕೊಡುವುದು. ಈ ಹಿನ್ನೆಲೆಯಲ್ಲಿ ಮನದ ಮೈಲಿಗೆ ಕಳೆಯಲು, ಹಂತ ಹಂತವಾಗಿ ಶರಣತ್ವವನ್ನು ರೂಢಿಸಿಕೊಳ್ಳಲು 'ಮತ್ತೆ ಕಲ್ಯಾಣ' ದಾರಿದೀಪ ಎಂದರು.

ಕೋಳಗುಂದದ ಕೇದಿಗೆ ಮಠದ ಶ್ರೀ ಜಯ ಚಂದ್ರಶೇಖರ ಸ್ವಾಮೀಜಿ ಮಾತನಾಡಿ 12 ನೆಯ ಶತಮಾನದಲ್ಲಿ ಬಸವಾದಿ ಶರಣರು ಸ್ಥಾಪಿಸಿದ ಹೊಸ ಧರ್ಮವನ್ನು 21 ನೆಯ ಶತಮಾನದಲ್ಲಿ 'ಮತ್ತೆ ಕಲ್ಯಾಣ'ದ ಮೂಲಕ ಜನರ ಬಳಿಗೆ ಪಂಡಿತಾರಾಧ್ಯ ಶ್ರೀಗಳು ತರುತ್ತಿದ್ದಾರೆ. ಶರಣರ ಧರ್ಮ ಕಠಿಣವಾದದ್ದಲ್ಲ; ಸರಳವಾಗಿರು ವಂಥದ್ದು. ಬಸವಣ್ಣನಿಗೆ 8ನೇ ವಯಸ್ಸಿನಲ್ಲಿ ಜನಿವಾರ ಹಾಕುವ ಸಂದರ್ಭದಲ್ಲಿ ತನ್ನ ಅಕ್ಕ, ತಾಯಿಗಿಲ್ಲದ ಜನಿವಾರ ನನಗೂ ಬೇಡವೆಂದರು. ಗಂಡು ಮಕ್ಕಳಂತೆ ಹೆಣ್ಣು ಮಕ್ಕಳಿಗೂ ಧಾರ್ಮಿಕ ಸ್ವಾತಂತ್ರ್ಯ ಇರುವ ಲಿಂಗಾಯತ ಧರ್ಮ ಸ್ಥಾಪಿಸಿದರು ಎಂದರು.

'ಶರಣನಾಗುವ ಪರಿ' ಕುರಿತಂತೆ ಚಿಕ್ಕಮಗಳೂರಿನ ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿಯ ಸದಸ್ಯರಾದ ರೇಖಾ ಪ್ರೇಮ್‌ಕುಮಾರ್ ಮಾತನಾಡಿದರು.

ಆರಂಭದಲ್ಲಿ ಶಿವಸಂಚಾರದ ಕೆ. ದಾಕ್ಷಾಯಣಿ, ಹೆಚ್. ಎಸ್. ನಾಗರಾಜ್ ಮತ್ತು ತಬಲಾ ಸಾಥಿ ಶರಣ್ ವಚನ ಗೀತೆಗಳನ್ನು ಹಾಡಿದರು. ವಿದ್ಯಾರ್ಥಿನಿ ನಿಶ್ಚಿತಾ ವಚನ ಪ್ರಾರ್ಥನೆ ಮಾಡಿದರೆ, ಹೆಚ್. ಮಂಜುನಾಥ್ ಸ್ವಾಗತಿಸಿದರು. ಶಿಕ್ಷಕ ಆರ್. ಓಂಕಾರಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಚಂದ್ರೇಗೌಡ ವಂದಿಸಿದರು.

## ಕಾಂಗ್ರೆಸ್ ಯೂಟ್ಯೂಬ್ ಚಾನಲ್ ಡಿಲೀಟ್

ನವದೆಹಲಿ, ಆ.24 – ಕಾಂಗ್ರೆಸ್ ಪಕ್ಷದ ಯೂಟ್ಯೂಬ್ ಚಾನಲ್ ಅಳಿಸಲಾಗಿದೆ. ತಾಂತ್ರಿಕ ದೋಷದಿಂದ ಈ ರೀತಿ ಆಗಿದೆಯೇ ಅಥವಾ ಇದರ ಹಿಂದೆ ವಿಧ್ವಂಸಕ ಕೃತ್ಯ ಇದೆಯೇ ಎಂಬ ಬಗ್ಗೆ ಪರಿಶೀಲಿಸುತ್ತಿರುವುದಾಗಿ ಕಾಂಗ್ರೆಸ್ ಹೇಳಿದೆ. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಯೂಟ್ಯೂಬ್ ಚಾನಲ್ ಡಿಲೀಟ್ ಆಗಿದೆ. ಈ ಬಗ್ಗೆ ಯೂಟ್ಯೂಬ್ ತಂಡದ ಜೊತೆ ಕಾರ್ಯನಿರ್ವಹಿಸುತ್ತಿದ್ದೇವೆ ಎಂದು ಕಾಂಗ್ರೆಸ್ ಪಕ್ಷ ಹೇಳಿಕೆ ನೀಡಿದೆ.

## ಕೊಟ್ಟೂರಿನಲ್ಲಿ ಇಂದು ಜೀ ಕನ್ನಡ ಗಣೇಶೋತ್ಸವ

ಜೀ ಕನ್ನಡ ವತಿಯಿಂದ 'ಜೀ ಕನ್ನಡ ಗಣೇಶೋತ್ಸವ' ಕಾರ್ಯಕ್ರಮವು ಕೊಟ್ಟೂರಿನ ವಿದ್ಯಾನಗರದ ತುಂಗಭದ್ರಾ ಶಿಕ್ಷಣ ಸಂಸ್ಥೆಯ ಸಿಪಿಇಡಿ ಕಾಲೇಜು ಮೈದಾನದಲ್ಲಿ ಇಂದು ಸಂಜೆ 5.30 ಕ್ಕೆ ನಡೆಯಲಿದೆ. ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದೆ.


ಜಿ. ಶಂಕರ ಎಂ.ಎ., ಎಲ್.ಎಲ್.ಬಿ.
ವಕೀಲರು
ಮೋ: 9481364903
ಸಂಖ್ಯೆ :

ವಿಳಾಸ: #1580/1
1ನೇ ಮೇನ್, 16ನೇ ಕ್ರಾಸ್
ವಿನೋಬನಗರ, ದಾವಣಗೆರೆ-4
ದಿನಾಂಕ: 24-08-2022

**ಸಾರ್ವಜನಿಕ ಪ್ರಕಟಣೆ**

ನನ್ನ ಕಕ್ಷಿದಾರರಾದ ಎಫ್ ರಿಯಾಜ್ ಅಹಮದ್ ಬಿನ್ ಫಜ್ಲೂ ರೆಹಮಾನ್ ವಾಸ: #708, ಛಲವಾದಿ ಕೇರಿ, ಗೋಕುಲನಗರ, ದಾವಣಗೆರೆ ಇವರ ಪರವಾಗಿ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ;

ದಿನಾಂಕ: 10-08-2022 ರಂದು 'ಜನತಾವಾಣಿ' ಮತ್ತು 'ಪ್ರಜಾವಾಣಿ' ಕನ್ನಡ ದಿನಪತ್ರಿಕೆಯಲ್ಲಿ ಸೈಯದ್ ಮುಜಾಮಿಲ್ ಇವರ ಮಾಹಿತಿಯ ಮೇರೆಗೆ ಆನಂದಪ್ಪ ಜೋತಿ/ ಮಹಾಂತೇಶ್ ಸಿ., ವಕೀಲರು, ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡುವ ಸಂಬಂಧವಾಗಿ ಸಾರ್ವಜನಿಕ ಪ್ರಕಟಣೆಯನ್ನು ನೀಡಿದ್ದು, ಸದರಿ ಸಾರ್ವಜನಿಕ ಪ್ರಕಟಣೆಯಲ್ಲಿ ತಿಳಿಸಿರುವ ಸ್ವತ್ತನ್ನು ಮಾರಾಟ ಮಾಡುವುದಕ್ಕೆ ನನ್ನ ಕಕ್ಷಿದಾರರ ತಕರಾರು ಮತ್ತು ಆಕ್ಷೇಪಣೆ ಇರುತ್ತದೆ.

ಏಕೆಂದರೆ ಷೆಡ್ಯೂಲ್ ಸ್ವತ್ತಿನ ಈ ಹಿಂದಿನ ಮಾಲೀಕರಾದ ಅಬ್ರಹಾಂ ಆಶೀರ್ವಾದ ಬಿನ್ ಮಹಾರಾಜ ನಾಡರ್ ಇವರು ದಿನಾಂಕ 11-08-2016 ರಂದು ಎಸ್.ಆರ್ .ನಂ.257/2016-17ರಲ್ಲಿ ನೋಂದಣಿಯಾಗಿರುವ ಜಿ.ಪಿ.ಎ. ಪತ್ರದ ಮೂಲಕ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಒಳಗೊಂಡಂತೆ ಕುಂದುವಾಡ ಗ್ರಾಮದ ಸ.ನಂ.204/5-3 ರಲ್ಲಿ ಒಟ್ಟು 10 ಗುಂಟೆ ಭೂ ಪರಿವರ್ತನೆಗೊಂಡ ಸ್ವತ್ತನ್ನು ಮಾರಾಟ ಮಾಡುವ ಸಂಬಂಧವಾಗಿ ಜಿ.ಪಿ.ಎ. ಪತ್ರವನ್ನು ನನ್ನ ಕಕ್ಷಿದಾರರ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ಅದರಂತೆ ಸದರಿ ಸ್ವತ್ತಿನ ಪ್ರತಿಫಲದ ಪೂರಾ ಹಣವನ್ನು ದಿನಾಂಕ 11-08-2016 ರಂದು ಅಬ್ರಹಾಂ ಆಶೀರ್ವಾದ ಇವರಿಗೆ ರೂ.66,30,000/- ಗಳನ್ನು ನನ್ನ ಕಕ್ಷಿದಾರರು ನೀಡಿ ಅವರಿಂದ ಹಣ ಸಂದಾಯ ರಸೀದಿಯನ್ನು ಪಡೆದಿದ್ದು, ಸದರಿ ಜಿ.ಪಿ.ಎ. ಈವರೆಗೂ ಮುಂದುವರೆದಿರುತ್ತದೆ. ಸದರಿ ಮೇಲ್ಕಂಡ 10 ಗುಂಟೆ ಪ್ರದೇಶದಲ್ಲಿ 05 ಗುಂಟೆ ಸ್ವತ್ತನ್ನು ದಿನಾಂಕ 01-09-2016 ರಂದು ಸೈಯದ್ ಅಲ್ತಾಫ್ ಇವರಿಗೆ ಕ್ರಯಕ್ಕೆ ಮಾರಾಟ ಮಾಡಿ ಉಳಿದ ಕೆಳಕಂಡ ಷಡ್ಯೂಲ್ ಸ್ವತ್ತಿಗೆ ನನ್ನ ಕಕ್ಷಿದಾರರು ಜಿ,ಪಿ.ಎ. ಮೂಲಕ ಹಕ್ಕುಳ್ಳವರಾಗಿರುತ್ತಾರೆ.

ಆದ್ದರಿಂದ ದಿನಾಂಕ 10-08-2022 ರಂದು 'ಜನತಾವಾಣಿ' ಮತ್ತು 'ಪ್ರಜಾವಾಣಿ' ಕನ್ನಡ ದಿನಪತ್ರಿಕೆಯಲ್ಲಿ ತಿಳಿಸಿದಂತೆ, ಕನಗೊಂಡನಹಳ್ಳಿ ಗ್ರಾಮದ ವೈ.ಎನ್. ತಿಪ್ಪಣ್ಣ ಬಿನ್ ನಿಂಗಪ್ಪ ವೈ ಇವರಾಗಲಿ ಅಥವಾ ಇವರ ಪರ ಬೇರೆ ಯಾರಾದರೂ ಆಗಲಿ ಷೆಡ್ಯೂಲ್ ಸ್ವತ್ತನ್ನು ಮಾರಾಟ ವಗೈರೆ ಮಾಡುವುದಕ್ಕೆ ಮತ್ತು ಇವರಿಂದ ಇತರರು ಕ್ರಯಕ್ಕೆ ಖರೀದಿ ಮಾಡುವುದಕ್ಕೆ ನನ್ನ ಕಕ್ಷಿದಾರರ ಪ್ರಬಲ ತಕರಾರು ಇರುತ್ತದೆ. ಒಂದು ವೇಳೆ ನನ್ನ ಕಕ್ಷಿದಾರರ ಹಕ್ಕಿಗೆ ಸಂಬಂಧಿಸಿದ ಷೆಡ್ಯೂಲ್ ಸ್ವತ್ತನ್ನು ಸಾರ್ವಜನಿಕರು ಬೇರೇ ಯಾರೇ ಆಗಲಿ ಖರೀದಿ ವ್ಯವಹಾರ ಮಾಡಬಾರದೆಂದು ಹಾಗೂ ಒಂದು ವೇಳೆ ಖರೀದಿ ವ್ಯವಹಾರ ಮಾಡಿದಲ್ಲಿ ನನ್ನ ಕಕ್ಷಿದಾರರ ಕಾನೂನುಬದ್ಧ ಹಕ್ಕಿಗೆ ಬಾಧಕವಾಗಿರುವುದಿಲ್ಲ ಹಾಗೂ ಒಂದು ವೇಳೆ ಬೇರೆ ಯಾರಾದರೂ ಆಗಲಿ ಪೆಟ್ರೋಲ್ ಸ್ವತ್ತಿನ ಸಂಬಂಧ ಖರೀದಿ ವಗೈರೆ ಮಾಡಿದಲ್ಲಿ ನನ್ನ ಕಕ್ಷಿದಾರರು ಸದರಿಯವರುಗಳ ವಿರುದ್ಧ ಪ್ರಕರಣ ದಾಖಲಿಸಲಿದ್ದಾರೆ ತಿಳಿಯಿರಿ.

**ಷೆಡ್ಯೂಲ್:** ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಕುಂದುವಾಡ ಗ್ರಾಮದ ಸ.ನಂ.204/5-3 ಇದರ ವಿಸ್ತೀರ್ಣ 05 ಗುಂಟೆ ಉಳ್ಳ ಅಲಿನೇಷನ್ ಆದ ಪ್ರದೇಶದಲ್ಲಿ ವಿಂಗಡಿಸಿರುವ ಬಸವೇಶ್ವರ ಬಡಾವಣೆಯ ಹತ್ತಿರ ಕುಂದುವಾಡ ಲಿಂಕ್ ರಸ್ತೆಯಲ್ಲಿ ಬರತಕ್ಕ ಡೋರ್ ನಂ.4141 ವಿಸ್ತೀರ್ಣ 25.00 x 13.71 ಮೀಟರ್‌ವುಳ್ಳ ನಿವೇಶನಕ್ಕೆ ಚಕ್ಕುಬಂಧಿ: ಪೂರ್ವಕ್ಕೆ: ಇದೇ ಸ.ನಂ. ಪೈಕಿ ಸ್ವತ್ತು, ಪಶ್ಚಿಮಕ್ಕೆ: 40' ಅಗಲದ ರಸ್ತೆ, ಉತ್ತರಕ್ಕೆ: ರಿ.ಸ.ನಂ.204/ 5-3 ರ ಜಮೀನು ಮತ್ತು ದಕ್ಷಿಣಕ್ಕೆ: ಸೈಯದ್ ಅಲ್ತಾಫ್ ಇವರ ಸ್ವತ್ತು ಈ ಮಧ್ಯದ ಸ್ವತ್ತು ಈ ಸಾರ್ವಜನಿಕ ಪ್ರಕಟಣೆಗೆ ಒಳಪಟ್ಟಿರುತ್ತದೆ.

ಎಫ್. ರಿಯಾಜ್ ಅಹಮದ್-ಕಕ್ಷಿದಾರರು ಜಿ.ಶಂಕರ- ವಕೀಲರು
ಮೊ: 9448318846, 9986785122

## ಸಿದ್ಧಗಂಗಾ ಶ್ರೀಗಳಿಗೆ ಮಕ್ಕಳ ಲೋಕದಿಂದ ಗೌರವ

ದಾವಣಗೆರೆ, ಆ.24- ನಿಟುವಳ್ಳಿಯ ಮಕ್ಕಳ ಲೋಕವನ್ನು ಕಳೆದ 20 ವರ್ಷಗಳ ಹಿಂದೆ ಶ್ರೀ ಸಿದ್ಧಗಂಗಾ ಡಾ. ಶಿವಕುಮಾರ ಸ್ವಾಮೀಜಿಗಳ ಸಲಹೆ ಮತ್ತು ಮಾರ್ಗದರ್ಶನ ಪಡೆದು ಸ್ಥಾಪಿಸಿರುವುದಾಗಿ ಶ್ರೀ ಸಿದ್ಧಗಂಗಾ ಮಕ್ಕಳ ಲೋಕದ ಸ್ಥಾಪಕರಾದ ಹಿರಿಯ ಸಾಹಿತಿ ಕೆ.ಎನ್. ಸ್ವಾಮಿ ತಿಳಿಸಿದರು.

ಮಕ್ಕಳ ಲೋಕದ ಮಕ್ಕಳಿಗೆ ನಗರದ ದಾನಿಗಳ ಸಹಕಾರ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಮಾರ್ಗದರ್ಶನದಂತೆ ಉಚಿತ ಶಿಕ್ಷಣ, ಪುಸ್ತಕ, ಬ್ಯಾಗು, ಪೆನ್ನು ನೀಡುವುದರ ಜೊತೆಗೆ ಸಿದ್ಧಗಂಗಾ ಶ್ರೀಗಳ ಸ್ಮರಣಾರ್ಥವಾಗಿ ದಾಸೋಹವನ್ನು ಏರ್ಪಡಿಸಲಾಗಿತ್ತು ಎಂದು ಸ್ಮರಿಸಿದರು. ಪ್ರಾಚಾರ್ಯರಾದ ರುದ್ರಾಕ್ಷಿಬಾಯಿ ಬಾಗೇವಾಡಿ, ಸಂಗೀತ ಶಾಲೆಯ ಪ್ರಾಚಾರ್ಯ ರುಕ್ಮಾಬಾಯಿ ಉಪಸ್ಥಿತರಿದ್ದರು.

# ಕಾಂಗ್ರೆಸ್‌ನ ತ್ಯಾಗ-ಬಲಿದಾನದಿಂದ ಸ್ವಾತಂತ್ರ್ಯ



### ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ

ದಾವಣಗೆರೆ,ಆ.24- ಕಾಂಗ್ರೆಸ್ ಪಕ್ಷದವರ ತ್ಯಾಗ ಬಲಿದಾನದಿಂದ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದೆಯೇ ವಿನಃ ಬ್ರಿಟಿಷರ ಕ್ಷಮೆಯಾಚಿಸಿದವರಿಂದಲ್ಲ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಹೇಳಿದರು.

ನಗರದ ಎಸ್.ಎಸ್. ಭವನ - ಜಿಲ್ಲಾ ಕಾಂಗ್ರೆಸ್ ಕಛೇರಿ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ದೇಶದಲ್ಲಿನ ಎಲ್ಲಾ ಜಾತಿ, ಧರ್ಮ, ವರ್ಗದವರನ್ನು ಒಂದೇ ವೇದಿಕೆಯಲ್ಲಿ ತೆಗೆದುಕೊಂಡು ಹೋಗುವ ಮೂಲಕ ಸ್ವಾತಂತ್ರ್ಯ ತಂದು ಕೊಟ್ಟ ನಾಯಕರ ಪರಿಶ್ರಮಕ್ಕೆ ಕೃತಜ್ಞತೆ ಹೇಳಬೇಕಾಗಿದೆ ಎಂದರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಮಹನೀಯರನ್ನು ನೆನೆದು ಮುನ್ನಡೆಯಬೇಕಾಗಿದೆ. ಅವರ ಹೋರಾಟದ ಪರಿಶ್ರಮವೇ ನಾವುಗಳು ಇಂದು ದೇಶದಲ್ಲಿ ನೆಮ್ಮದಿಯ ಜೀವನ ನಡೆಸಲು ಕಾರಣ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಕೆ.ಜಿ.ಶಿವಕುಮಾರ್, ಎಸ್.ಮಲ್ಲಿಕಾರ್ಜುನ್, ಸೋಮಲಾಪುರದ ಹನುಮಂತಪ್ಪ, ಮಹಿಳಾ ಕಾಂಗ್ರೆಸ್‌ನ ಮಂಗಳಮ್ಮ, ನಾಗರತ್ನಮ್ಮ, ರಾಜೇಶ್ವರಿ, ದ್ರಾಕ್ಷಾಯಣಮ್ಮ, ಗೀತಾ ಚಂದ್ರಶೇಖರ್, ಯಶೋಧಮ್ಮ, ಸಲ್ಮಾಬಾನು, ಎಸ್ಸಿ ಘಟಕದ ಬಿ.ಹೆಚ್.ವೀರಭದ್ರಪ್ಪ, ರಾಕೇಶ್, ಕಾರ್ಮಿಕ ಘಟಕದ ಸುಭಾನ್ ಸಾಬ್ ಮತ್ತಿತರೆ ಕಾರ್ಯಕರ್ತರು ಭಾಗವಹಿಸಿದ್ದರು.

# ರಕ್ತದಾನದಿಂದ ಹೃದಯಾಘಾತ ಕಡಿಮೆ

### ರಕ್ತ ದಾನ ಶಿಬಿರದಲ್ಲಿ ಎ.ವಿ. ಕಮಲಮ್ಮ ಮಹಿಳಾ ಕಾಲೇಜು ಪ್ರಾಂಶುಪಾಲ ಡಾ.ಕುಮಾರ್

ದಾವಣಗೆರೆ, ಆ.24- ಜೀವನ್ಮರಣ ಹೋರಾಟದಲ್ಲಿರುವವರಿಗೆ ರಕ್ತದಾನ ಮಾಡುವ ಮೂಲಕ ಜೀವ ನೀಡುವುದು ಒಬ್ಬ ವ್ಯಕ್ತಿಯ ಶ್ರೇಷ್ಠ ಕೆಲಸವೆಂದು ಎ.ವಿ. ಕಮಲಮ್ಮ ಮಹಿಳಾ ಕಾಲೇಜು ಪ್ರಾಂಶುಪಾಲ ಡಾ. ಬಿ.ಪಿ.ಕುಮಾರ್ ಅಭಿಪ್ರಾಯಪಟ್ಟರು.

ಕಾಲೇಜಿನಲ್ಲಿ ಎನ್.ಎಸ್. ಎಸ್ ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ 'ರಕ್ತನಿಧಿ ಕೇಂದ್ರ'ದ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ರಕ್ತದಾನ ಶಿಬಿರದಲ್ಲಿ ಅವರು ಮಾತನಾಡಿದರು.

ರಕ್ತದಾನ ಮಾಡುವುದರಿಂದ ನಮ್ಮ ದೇಹದಲ್ಲಿ ಹೊಸ ರಕ್ತ ಉತ್ಪತ್ತಿಯಾಗುತ್ತದೆ. ಇದರಿಂದ ದೇಹದಲ್ಲಿನ ಕೊಬ್ಬಿನ ಅಂಶ ಕಡಿಮೆಯಾಗುತ್ತದೆ. ರಕ್ತದಾನದಿಂದ ಹೃದಯಘಾತ ಕಡಿಮೆಯಾಗುತ್ತದೆ. ರಕ್ತದ ಒತ್ತಡ ಮತ್ತು ಅದಕ್ಕೆ ಸಂಬಂಧಿಸಿದ ಸಮಸ್ಯೆಗಳು ಕಡಿಮೆಯಾಗುತ್ತವೆ ಎಂದು ಅವರು ತಿಳಿಸಿದರು.

ರೆಡ್‌ಕ್ರಾಸ್ ಸಂಸ್ಥೆ ಮೆಡಿಕಲ್ ಆಫೀಸರ್ ಡಾ|| ಪಿ.ಕೆ. ಬಸವರಾಜ್ ಮಾತನಾಡಿ, ವಿದ್ಯಾರ್ಥಿಗಳು ರಕ್ತದಾನ ಮಾಡುವುದಕ್ಕೆ ಮುಂದೆ ಬರಬೇಕು, ರಕ್ತದಾನ ಮಾಡಿದರೆ ನಮ್ಮ ದೇಹಕ್ಕೆ ತೊಂದರೆಯಾಗುತ್ತದೆ ಎಂಬ ತಪ್ಪು ಕಲ್ಪನೆ ಇದೆ. ಈ ಕಲ್ಪನೆಯಿಂದ ಎಷ್ಟೋ ವಿದ್ಯಾರ್ಥಿಗಳು ರಕ್ತದಾನ ಮಾಡುವುದಕ್ಕೆ ಮುಂದೆ ಬರುತ್ತಿಲ್ಲ. ರಕ್ತದಾನ ಮಾಡಿದರೆ ಆರೋಗ್ಯ ವೃದ್ಧಿಯಾಗುತ್ತದೆ ಎಂದು ಹೇಳಿದರು.

ಶಿಬಿರದಲ್ಲಿ 20ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ರಕ್ತದಾನ ಮಾಡಿದರು. ಎನ್.ಎಸ್. ಎಸ್. ಅಧಿಕಾರಿ ಶ್ರೀಮತಿ ಪ್ರಭಾವತಿ ಹೊರಡಿ, ಡಾ. ಲೋಹಿತ್ ಹೆಚ್.ಎಂ. ಹಾಗೂ ರೆಡ್‌ಕ್ರಾಸ್ ಸಂಸ್ಥೆಯ ಡಿ.ಎನ್. ಶಿವಾನಂದ್ ಮತ್ತು ಡಿ.ಎಸ್. ಸಿದ್ದಣ್ಣ ಉಪಸ್ಥಿತರಿದ್ದರು.



## ಎರೇಬೂದಿಹಾಳ್ : ಗಮನ ಸೆಳೆದ ಪುಟಾಣಿಗಳು



ಮಲೇಬೆನ್ನೂರು, ಆ.24- ಎರೇಬೂದಿಹಾಳ್ ಗ್ರಾಮದ ಅಂಗನವಾಡಿ 'ಬಿ' ಕೇಂದ್ರದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮದಲ್ಲಿ ಪುಟಾಣಿ ಮಕ್ಕಳು ಕೃಷ್ಣ, ರಾಧೆಯ ವೇಷಾಧಿಕಾರಿಗಳಾಗಿ ಗಮನ ಸೆಳೆದರು.

ಈ ವೇಳೆ ಅತ್ಯುತ್ತಮ ವೇಷಾಧಾರಿಗಳಾಗಿದ್ದ ಪುಟಾಣಿಗಳಿಗೆ ಬಹುಮಾನ ನೀಡಲಾಯಿತು.

ದೇವರಬೆಳಕೆರೆ ಗ್ರಾ.ಪಂ. ಅಧ್ಯಕ್ಷ ಜಗದೀಶ್, ಸದಸ್ಯರಾದ ಶಿವರಾಜ್, ವನಜಾಕ್ಷಮ್ಮ, ಬಾಲವಿಕಾಸ ಸಮಿತಿ ಅಧ್ಯಕ್ಷೆ ನಾಗವೇಣಿ ಸೇರಿದಂತೆ ಪೋಷಕರು ಭಾಗವಹಿಸಿ, ಪುಟಾಣಿಗಳ ಪ್ರತಿಭೆಯನ್ನು ಕಣ್ತುಂಬಿಕೊಂಡರು.

ಅಂಗನವಾಡಿ ಕಾರ್ಯಕರ್ತೆ ಛಾಯಿನಿ ಮತ್ತು ಸಹಾಯಕಿ ನೇತ್ರ ಕಾರ್ಯಕ್ರಮ ಸಂಘಟಿಸಿದ್ದರು.

## ಐ.ಬಿ.ಪಿ.ಎಸ್. ರಾಷ್ಟ್ರೀಕೃತ ಬ್ಯಾಂಕ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ದಾವಣಗೆರೆ, ಆ.24- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐ.ಬಿ.ಪಿ.ಎಸ್ ರಾಷ್ಟ್ರೀಕೃತ ಬ್ಯಾಂಕ್‌ನವರು ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ನೀಡಲಾಗುತ್ತದೆ.

ಆಸಕ್ತರು ಇದೇ ದಿನಾಂಕ 29 ರೊಳಗಾಗಿ ಹೆಸರು ನೋಂದಾಯಿಸಿಕೊಳ್ಳಲು ದೂರವಾಣಿ: 0821-2515944 ಸಂಖ್ಯೆಯನ್ನು ಸಂಪರ್ಕಿಸಬಹುದೆಂದು ಕರಾಮುವಿ ಪ್ರಭಾರ ಕುಲಸಚಿವ ಡಾ. ಎ. ಖಾದರ್ ಪಾಷ ಅವರು ತಿಳಿಸಿದ್ದಾರೆ.




## ಕರುಣಾ ಟ್ರಸ್ಟ್‌ನಿಂದ ವ್ಹೀಲ್‌ಚೇರ್ ವಿತರಣೆ

ದಾವಣಗೆರೆ, ಆ.24- ನಗರದ ಸಾಮಾಜಿಕ ಸೇವಾ ಸಂಸ್ಥೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ 12 ವರ್ಷದ ಅಂಗವಿಕಲ ಮಗುವಿಗೆ ವ್ಹೀಲ್‌ಚೇರ್ ವಿತರಿಸಲಾಯಿತು.

## ಹುಲಿಗೆಮ್ಮ ದೇವಿಗೆ 3,500 ವೀಳ್ಯೆದೆಲೆಯ ವಿಶೇಷಾಲಂಕಾರ

ದಾವಣಗೆರೆ, ಆ. 24 - ಇಲ್ಲಿನ ಗಾಂಧಿ ನಗರದಲ್ಲಿನ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದಲ್ಲಿ ಶ್ರಾವಣ ಮಾಸದ ಕಡೇ ಸೋಮವಾರದ ಪ್ರಯುಕ್ತ ಇಂದು ಶ್ರೀ ಹುಲಿಗೆಮ್ಮದೇವಿಗೆ 3,500 ವೀಳ್ಯೆದೆಲೆಯ ವಿಶೇಷಾಲಂಕಾರ ಮಾಡಲಾಗಿತ್ತು.

ಮುಂಜಾನೆಯೇ ದೇವಿಗೆ ಅಭಿಷೇಕ, ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ದೇವಿಗೆ ಶೃಂಗರಿಸಲಾಗಿದ್ದ ವೀಳ್ಯೆದೆಲೆ ಹಾಗೂ ಪುಷ್ಪಾಲಂಕಾರವು ಕಣ್ಮನ ಸೆಳೆಯಿತು.



## ಹಿಂದೂ ಯುವಶಕ್ತಿ ಗಣೇಶೋತ್ಸವ ಧ್ವಜಸ್ತಂಭ ಪೂಜೆ



ದಾವಣಗೆರೆ, ಆ. 24 - ಹಿಂದೂ ಯುವ ಶಕ್ತಿ ವತಿಯಿಂದ 31ನೇ ವರ್ಷದ ಗಣೇಶ ಮಹೋತ್ಸವದ ಪ್ರಯುಕ್ತ ಧ್ವಜಸ್ತಂಭದ ಪೂಜೆ ಹಮ್ಮಿಕೊಳ್ಳಲಾಗಿತ್ತು.

ಆವರಗೊಳ್ಳ ಶಾಖಾಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಪೂಜಾ ಸಾನ್ನಿಧ್ಯ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾಜಿ ಮಹಾಪೌರ ಬಿ.ಜೆ. ಅಜಯ್‌ಕುಮಾರ್, ದೂಡಾ ಮಾಜಿ ಅಧ್ಯಕ್ಷ ದೇವರಮನೆ ಶಿವಕುಮಾರ್, ಮಹಾನಗರ ಪಾಲಿಕೆ ಸದಸ್ಯ ನಾಗರಾಜ, ಮಹಾನಗರ ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ. ಶೆಟ್ಟಿ, ಪಾಲಿಕೆ ಸದಸ್ಯ ವಿನಾಯಕ ಪೈಲ್ವಾನ್, ಬಿಜೆಪಿ ಮುಖಂಡ ಶ್ರೀನಿವಾಸ್ ದಾಸಕರಿಯಪ್ಪ, ಬ್ರಾಹ್ಮಣ ಅಭಿವೃದ್ಧಿ ನಿಗಮದ ನಿರ್ದೇಶಕ ಪಿ.ಸಿ. ಶ್ರೀನಿವಾಸ್ ಹಾಗೂ ಹಿಂದೂ ಯುವ ಶಕ್ತಿಯ ಸದಸ್ಯರು, ತೋಗಟವೀರ ಸಮಾಜದ ಮುಖಂಡರು ಉಪಸ್ಥಿತರಿದ್ದರು.

## ಮಾಂಟೆಸೊರಿಯಲ್ಲಿ ಮಾಜಿ ಯೋಧ ಚನ್ನಬಸವನಗೌಡ ಗೌಡರಿಗೆ ಸನ್ಮಾನ



ದಾವಣಗೆರೆ, ಆ. 24- ನಗರದ ಮಾಂಟೆಸೊರಿ ಕಾನ್ವೆಂಟ್‌ನಲ್ಲಿ ನಡೆದ 75 ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಬಿಎಸ್‌ಎಫ್ ಮಾಜಿ ಯೋಧ ಚನ್ನಬಸವನಗೌಡ ಗೌಡರ, ಹಳೆಯ ವಿದ್ಯಾರ್ಥಿ ಕೆ. ಎನ್. ಬಸವರಾಜ್, ಸಾಹಿತಿ ಶ್ರೀಮತಿ ಗಿರಿಜಾ ಸಿದ್ದಲಿಂಗಪ್ಪ, ಎಂ.ಎನ್. ಅಮಿತ್ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಸೌಮ್ಯ ಹಾಗೂ ಚಿನ್ಮಯದತ್ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕಿ ಶ್ರೀಮತಿ ಸುಮಂಗಳ ಸ್ವಾಗತಿಸಿದರು. ಶಿಕ್ಷಕಿ ವೇದಾ ವಂದಿಸಿದರು.

## ನಗರದಲ್ಲಿಂದು ರಸ್ತೆ ಸುರಕ್ಷಾತಾ ಸಮಿತಿ ಸಭೆ

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಇಂದು ಮಧ್ಯಾಹ್ನ 3.30 ಕ್ಕೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯನ್ನು ಕರೆಯಲಾಗಿದೆ.

## ಇಂದು ರೇಬೀಸ್ ವಿರೋಧಿ ಮಾಸ

ಇಂದಿನಿಂದ ಬರುವ ಸೆಪ್ಟೆಂಬರ್ 12 ರವರೆಗೆ ಪಾಲಿ ಕ್ಲಿನಿಕ್ (ಜಿಲ್ಲಾ ಪಶು ಆಸ್ಪತ್ರೆ) ಆವರಣದಲ್ಲಿ ರೇಬೀಸ್ ವಿರೋಧಿ ಮಾಸಾಚರಣೆ ನಡೆಯಲಿದೆ. ನಾಯಿ ಮತ್ತು ಬೆಕ್ಕುಗಳಿಗೆ ಉಚಿತ ರೇಬೀಸ್ ಲಸಿಕಾ ಕಾರ್ಯಕ್ರಮವು ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ ನಡೆಯಲಿದೆ.

## ಹೊಯ್ಸಳ, ಕೆಳದಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಆ.24- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

6 ರಿಂದ 18 ವರ್ಷ ವಯೋಮಾನದೊಳಗಿನ ಮಕ್ಕಳು ಪ್ರಾಣದ ಹಂಗನ್ನು ತೊರೆದು ಹಾಗೂ ಸಮಯ ಪ್ರಜ್ಞೆಯಿಂದ ಇತರರ ಪ್ರಾಣ ರಕ್ಷಣೆಗಾಗಿ ಧೈರ್ಯ, ಸಾಹಸ ಪ್ರದರ್ಶಿಸಿದ ಬಾಲಕರಿಗೆ ಹೊಯ್ಸಳ ಮತ್ತು ಬಾಲಕಿಯರಿಗೆ ಕೆಳದಿ ಚೆನ್ನಮ್ಮ ಪ್ರಶಸ್ತಿಯನ್ನು ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಧಾನ ಮಾಡಲಾಗುತ್ತದೆ. ಪ್ರಶಸ್ತಿಗೆ ಆಯ್ಕೆಯಾದ ಮಕ್ಕಳಿಗೆ ತಲಾ ರೂ. 10000/- ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ.

ಅರ್ಜಿಯನ್ನು ಸೆ.31 ರೊಳಗಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸರ್ಕಾರಿ ಬಾಲಕರ ಬಾಲಮಂದಿರ ಕಟ್ಟಡ, 14ನೇ ಮುಖ್ಯ ರಸ್ತೆ, ಕುವೆಂಪುನಗರ, ಎಂ.ಸಿ.ಸಿ 'ಬಿ' ಬ್ಲಾಕ್, ದಾವಣಗೆರೆ ಈ ಕಚೇರಿಯಲ್ಲಿ ಪಡೆದು ಅಕ್ಟೋಬರ್ 11 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ. 08192-264056 ಗೆ ಸಂಪರ್ಕಿಸಬಹುದು ಎಂದು ಇಲಾಖೆಯ ಉಪ ನಿರ್ದೇಶಕರಾದ ವಾಸಂತಿ ಉಪ್ಪಾರ್ ತಿಳಿಸಿದ್ದಾರೆ.

## ಮಾಯಕೊಂಡದಲ್ಲಿ ಉದ್ಯಮಶೀಲತಾ ತರಬೇತಿ

ಮಾಯಕೊಂಡ, ಆ.24- ಶ್ರೀ ಬಸವೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಬೆಂಗಳೂರು, ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ಧಾರವಾಡ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬ್ಯಾಡಗಿ ಇವರ ಸಂಯುಕ್ತಾಶ್ರಯದಲ್ಲಿ ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕೆ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಲೀಡ್ ಬ್ಯಾಂಕ್‌ನ ಜಿಲ್ಲಾ ವಿಭಾಗೀಯ ಮಾರ್ಗದರ್ಶಿ ವ್ಯವಸ್ಥಾಪಕ ಜಿ.ಜಿ. ದೊಡ್ಡಮನಿ ಉದ್ಘಾಟಿಸಿದರು. ದಾವಣಗೆರೆ ಸಿಡಾಕ್‌ನ ಜಂಟಿ ನಿರ್ದೇಶಕ ಆರ್.ಪಿ. ಪಾಟೀಲ್, ಕಾಲೇಜಿನ ಪ್ರಾಂಶುಪಾಲ ಎನ್.ಎಂ. ಬಸವರಾಜಯ್ಯ, ಶ್ರೀ ಬಸವೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕೆ. ನಟರಾಜ, ಜಿ.ಎಸ್. ರಾಘವೇಂದ್ರ ರಾವ್, ಪ್ರೊ.ಚಂದ್ರಶೇಖರಪ್ಪ, ಬಿ.ಎಲ್. ಅಶೋಕ್, ಬಿ.ಎಲ್. ತಿಲಕ್ ಮತ್ತಿತರರು ಉಪಸ್ಥಿತರಿದ್ದರು.




**ಮನೆಗಳು ಮಾರಾಟಕ್ಕಿವೆ**
ವಿದ್ಯಾನಗರ ತರಳಬಾಳು ಬಡಾವಣೆ 40x40 ಪೂರ್ವ ಡ್ಯೂಪ್ಲೆಕ್ಸ್ ಹೌಸ್, ರಂಗನಾಥ ಬಡಾವಣೆಯಲ್ಲಿ 25x30 ಪೂರ್ವ ಮೇಲೆ - ಕೆಳಗೆ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಲೀಜ್‌ಗೆ ಇದೆ**
ಕುಂದುವಾಡ ರೋಡ್ ಜೈನ್ ಲೇಔಟ್, 2ನೇ ಮೇನ್, 2ನೇ ಕ್ರಾಸ್, DR/1885/81 ರಲ್ಲಿ ಬರುವ ಪೂರ್ವ ಪೇಸ್, 3ನೇ ಫ್ಲೋರ್‌ನಲ್ಲಿ ಸಿಂಗಲ್ ಬೆಡ್ ರೂಂ ಮನೆ ಲೀಜ್‌ಗೆ ಇದೆ.
ಸಸ್ಯಹಾರಿಗಳಿಗೆ ಮಾತ್ರ.
97392 04631, 88673 58631

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಆಯಾ ಬೇಕಾಗಿದ್ದಾರೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
ಮೊ: 98450-35710
7760739990

**ಕಮರ್ಷಿಯಲ್ ಅಥವಾ ಇಂಡಸ್ಟ್ರಿಯಲ್ ಸೈಟುಗಳು ಮಾರಾಟಕ್ಕಿವೆ**
ಸೋನಾಲಿಕ ಟ್ರ್ಯಾಕ್ಟರ್ ಷೋ ರೂಂ ಹಿಂಭಾಗ. 40x68 ಅಳತೆಯ 2 ಸೈಟುಗಳು ಮಾರಾಟಕ್ಕಿವೆ.
ಸಂಪರ್ಕಿಸಿ
97424 34049

**ಬೇಕಾಗಿದ್ದಾರೆ**
ಕಛೇರಿಯಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಆಪರೇಟರ್ (ಪುರುಷರು) ಬೇಕಾಗಿದ್ದಾರೆ. ಕಂಪ್ಯೂಟರ್‌ನಲ್ಲಿ ಬೇಸಿಕ್ ನಾಲೆಡ್ಜ್ (ಎಂ.ಎಸ್.ಆಫೀಸ್) ಹಾಗೂ ಇಂಗ್ಲೀಷ್, ಕನ್ನಡ ಟೈಪಿಂಗ್ ಬಲ್ಲವರು ಸಂಪರ್ಕಿಸಿ.
ಶ್ರೀ ರೇಣುಕಾದೇವಿ ಆಫೀಸ್,
ಜಗದಾಂಭ ಫರ್ನಿಚರ್ ಎದುರು, 2ನೇ ಮಹಡಿ, ಹೆಚ್.ಎಂ. ರಸ್ತೆ, ದಾವಣಗೆರೆ 577001
94483 38657

**ರೂಮ್ ಮತ್ತು ಮಳಿಗೆಗಳು ಬಾಡಿಗೆಗೆ**
ಜಯನಗರ ಎ ಬ್ಲಾಕ್ ನಲ್ಲಿ ಫರ್ನಿಚರ್ ಸೌಲಭ್ಯ ವುಳ್ಳ ರೂಮ್ ಮತ್ತು ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ.
ಮೊ: 94484 39639

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಬೇಕಾಗಿದ್ದಾರೆ**
ಸ್ಟೀಲ್ ಫರ್ನಿಚರ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಫೋ. : 99017 16310

**ಬೇಕಾಗಿದ್ದಾರೆ**
ವಿದ್ಯಾನಗರ ಎರಡನೇ ಬಸ್ ಸ್ಟಾಪ್ ಹತ್ತಿರ, ಗಾರ್ಡನ್ ಕೆಲಸ ಮಾಡಲು ಬೇಕಾಗಿದ್ದಾರೆ.
ಫೋ. : 99162 36521

**ಮನೆಗಳು ಬಾಡಿಗೆಗೆ/ಲೀಸ್‌ಗೆ ಇವೆ**
ಲಕ್ಷ್ಮಿ ಲೇಔಟ್‌ನಲ್ಲಿರುವ ಎಸ್.ಎಸ್. ಹೈ-ಟೆಕ್ ಆಸ್ಪತ್ರೆ ಹತ್ತಿರ ಅರುಣಾ ಅಪಾರ್ಟ್‌ಮೆಂಟ್‌ನಲ್ಲಿ 2 ಬೆಡ್ ರೂಂ, 2 ಬಾತ್ ರೂಂ ಇರುವ ಮನೆಗಳು ಬಾಡಿಗೆಗೆ ಇವೆ.
96388 17967, 73380 43912

**ಬಾಡಿಗೆ ಮನೆಗಳು ಲೀಜ್‌ಗೆ ಮನೆಗಳು ದೊರೆಯುತ್ತವೆ ವಿಚಾರಿಸಿರಿ.**
12 ಲಕ್ಷಕ್ಕೆ ಸಿದ್ದವೀರಪ್ಪ ಬಡಾವಣೆ, 14 ಲಕ್ಷಕ್ಕೆ ಆಂಜನೇಯ ಬಡಾವಣೆ. 15 ಲಕ್ಷಕ್ಕೆ
ದಕ್ಷಿತ್ ಐನಳ್ಳಿ ಏಜೆಂಟ್
77955 06795

**Spoken English & Computer ಕಲಿಯಿರಿ**
Fees : 500/- only
74062 78270

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ, NTC : ನರ್ಸರಿ ಟೀಚರ್ಸ್ ಟ್ರೈನಿಂಗ್.
ನೇರ ಪರೀಕ್ಷೆಗಳು
SSLC, PUC, BA, B.Com, MBA
ಶ್ರೀ ಗಂಗೋತ್ರಿ ಕಾಲೇಜ್
ಲಾಯರ್ ರೋಡ್ ದಾವಣಗೆರೆ.
86602 35013

**ಹಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಕಿಯರು ಬೇಕಾಗಿದ್ದಾರೆ**
PUC., BA., BA.B.Ed., B.Com., D.Ed. NTC.,
73537 37235
82774 81196

**ಮನೆ ಬಾಡಿಗೆಗೆ ಇದೆ**
ವಿದ್ಯಾನಗರ, ದಾವಣಗೆರೆ ಡೋ.ನಂ 1946/18, 5ನೇ ಮುಖ್ಯ ರಸ್ತೆ 16ನೇ ಕ್ರಾಸ್‌ನಲ್ಲಿ ಮೊದಲನೇ ಫ್ಲೋರ್‌ನಲ್ಲಿ ಪೂರ್ವ ದಿಕ್ಕಿನಲ್ಲಿರುವ 3 ಬೆಡ್ ರೂಂ ಹೊಂದಿರುವ ಮನೆ ಬಾಡಿಗೆಗೆ ಇದೆ.
(ಸಸ್ಯಹಾರಿಗಳಿಗೆ ಮಾತ್ರ)
94802 43601, 98806 25700

**WANTED EXPERIENCED LADY TEACHERS**
B.Sc. B.Ed, PCM/CBZ -2.
BA B.Ed -1.D.Ed -1
PUC WITH NTC : 3 POSTS
VINAYAKA PUBLIC SCHOOL
KONDAJJI ROAD.NEAR DEVANAGARI GAS GODOWN, DVG.
95356 10817

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ :
08192 254736

**ಸೈಟ್‌ಗಳು ಮಾರಾಟಕ್ಕೆ ಇವೆ**
ಬನಶಂಕರಿ ಬಡಾವಣೆ 30x60 ಪೂರ್ವ, ಶಿವ-ಪಾರ್ವತಿ 40x60 ಪೂರ್ವ, ಉತ್ತರ ಗ್ಲಾಸ್ ಹೌಸ್ ಹತ್ತಿರ 30x32 ಕಾರ್ನರ್ ಪೂರ್ವ, ಶಿವ-ಪಾರ್ವತಿ ಬಡಾವಣೆ 30x40 ಪೂರ್ವ- ದಕ್ಷಿಣ ಕಾರ್ನರ್
97418 11694

**ಇಂಡಿಪೆಂಡೆಂಟ್ ಮನೆ ಬಾಡಿಗೆಗೆ ಇದೆ**
1 BHK ಇಂಡಿಪೆಂಡೆಂಟ್ ಮನೆ (ಪೂರ್ವ) ಶಿವಕುಮಾರ್ ಬಡಾವಣೆಯಲ್ಲಿ ಬಾಡಿಗೆಗೆ ಇದೆ.
ಏಜೆಂಟ್
95385 65909

**WANTED**
Accountant cum manager Female candidate for super market. Please contact :
SWAD HYPERMART
PJ Extension, near Bank of Baroda, next to Jain Vidyalaya Davangere. Ph.: 98447 42758

**ಬೋರ್‌ವೆಲ್ ಮಷಿನ್ ಮಾರಾಟಕ್ಕೆ ಇದೆ**
ಶಾಮನೂರು ದೇವರ ಬೆಳಕೆರೆ ರಸ್ತೆ 5ಹೆಚ್.ಪಿ 10 ಸ್ಟೇಜ್, 5 ಹೆಚ್.ಪಿ 5 ಸ್ಟೇಜ್, 2" ಜಿ.ಐ ಪೈಪು 195 ಅಡಿ, L&T ಸ್ಟಾರ್ಟರ್. 40 ಸಾವಿರ ರೇಟ್‌ನಲ್ಲಿ ಮಾರಾಟಕ್ಕಿದೆ.
94828 18253

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶಾಪ್‌ನಲ್ಲಿ ಅನುಭವವಿರುವ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ವೀರ್ ಕ್ರಿಯೇಷನ್ಸ್
ವಿಜಯಲಕ್ಷ್ಮೀ ರೋಡ್, ಗುಪ್ತ ಗೋಲ್ಡ್‌ಪ್ಯಾಲೇಸ್ ಎದುರು, ದಾವಣಗೆರೆ.
98447 36261, 96630 08996

**ಮನೆ ಬಾಡಿಗೆಗೆ ಇದೆ**
#641/15, ಉತ್ತಮ ಲೇಔಟ್, ಆವರಗೆರೆ, ದಾವಣಗೆರೆ ಮೊದಲನೇ ಮಹಡಿ ಹಾಗೂ ಎರಡನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಎಲ್ಲಾ ಸೌಕರ್ಯವಿದೆ.
99644 90568, 70196 32334

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**SAVI PASTRIES**
(Home Made Eggless Cakes)
Church Road, P.J. Extn.,Davangere.
ಬೇಕರಿ ಕೆಲಸಗಾರರು ಬೇಕಾಗಿದ್ದಾರೆ
ಫೋ. : 80956 52555

**ಮಾರಾಟಕ್ಕಿದೆ**
ದಾವಣಗೆರೆಯಿಂದ 20 ರಿಂದ 25 ಕಿ.ಮೀ ವ್ಯಾಪ್ತಿಯಲ್ಲಿ ಅಡಿಕೆ ತೋಟ, ನೀರಾವರಿ ಹಾಗೂ ಒಣ ಭೂಮಿ ಮತ್ತು ದಾವಣಗೆರೆ ನಗರದಲ್ಲಿ ಯಾವುದೇ ಅಳತೆಯ ನಿವೇಶನ ಮತ್ತು ಇತ್ತೀಚಿಗೆ ನಿರ್ಮಿಸಿದ ಹೊಸ ಮನೆ ಖರೀದಿ ಮತ್ತು ಮಾರಾಟಕ್ಕಾಗಿ ಸಂಪರ್ಕಿಸಿ.
99727 00107

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**Walk In Interview**
ADMIN - MBA Graduate
TYPIST/RECEPTIONIST
any Degree
Interview is on
27.08.22 at 10.00 am
Salary : Upto 2.4 lakh per anum
SAMRUDDHI ACADEMY
IAS/KAS Study Circle, St. Pauls Convent Road, P.J. Extn, Davangere.
96202 62361

**ಬೇಕಾಗಿದ್ದಾರೆ**
ಹೋಟೆಲ್ ಅಥವಾ ಕೆಫೆಯಲ್ಲಿ ಕೆಲಸ ಮಾಡಿದ ಅನುಭವವಿರುವ ಯುವಕರು ಬೇಕಾಗಿದ್ದಾರೆ. ಸಂಬಳ ಹಾಗೂ ಪ್ರೋತ್ಸಾಹ ಧನ ಹಾಗೂ ವಸತಿ ಇರುತ್ತದೆ.
72598 91548

**ಕೆಲಸಕ್ಕೆ ಬೇಕಾಗಿದ್ದಾರೆ**
ಎಂಇಎಸ್ ಪ್ರೌಢ ಶಿಕ್ಷಣ ಸಂಸ್ಥೆ ಆಂಜನೇಯ ಬಡಾವಣೆ ದಾವಣಗೆರೆ. ಆಫೀಸ್ ಕೆಲಸಕ್ಕೆ ಕನ್ನಡ ಮತ್ತು ಇಂಗ್ಲೀಷ್ ಟೈಪಿಂಗ್ ಬರುವಂತಹ ಆಪರೇಟರ್ಸ್ ಬೇಕಾಗಿದ್ದಾರೆ. ಶಾಲೆಗೆ ಆಯಾ ಕೆಲಸ, ಅಡುಗೆ-ಸಹಾಯಕರು ಬೇಕಾಗಿದ್ದಾರೆ ಸಂಪರ್ಕಿಸಿ:
98804 36414

**Sharp Call For Interview**
COMPUTER OPERATOR 1 NO
SALES EXECUTIVE 2 NO
GAURAV COMMUNICATIONS
DAVANGERE
94487 28866, 93799 06688

ಮುಖದ ಮೇಲಿರುವ ಕಪ್ಪುಕಲೆ, ಬಂಗು,ಮೊಡವೆಗಳು ಹೋಗುವ ಆಯುರ್ವೇದ ಕ್ರೀಮನ್ನು ನೇರವಾಗಿ ಮಾರಾಟ ಮಾಡಲು ಬೇಕಾಗಿದ್ದಾರೆ.
FULL TIME / PART TIME
ವೇತನ: 15000 + incentive
81057 81389

**ಮನೆ ಬಾಡಿಗೆಗೆ, ಲೀಸ್‌ಗೆ ಇವೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ಸಂಗಮ್ ಅಪಾರ್ಟ್‌ಮೆಂಟ್‌ನಲ್ಲಿ 2 ಬೆಡ್ ರೂಂ, 2 ಬಾತ್ ರೂಂ ಇರುವ ಮನೆಗಳು ಬಾಡಿಗೆಗೆ / ಲೀಸ್‌ಗೆ ಇವೆ. ಸಂಪರ್ಕಿಸಿ
96388 17967, 73380 43912

**REQUIRED**
1) Sales Executive with Commerce graduation for marketing of TATA Power Solar Systems.
2) Diploma/ITI in Electrical for Solar Power instalation.
Basavashree solar technologies
Jayadeva circle, Davangere.
CONTACT : 99001 42052

**ಬೇಕಾಗಿದ್ದಾರೆ**
ತಕ್ಷಣ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಕುಕ್ಕುವಾಡ ಶುಗರ್ ಫ್ಯಾಕ್ಟರಿನಲ್ಲಿ ಕೆಲಸ ಮಾಡಲು.
ಊಟ, ವಸತಿ ಸೌಲಭ್ಯ ಇದೆ
88678 53961, 91130 53483

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಪಾಸ್‌ಪೋರ್ಟ್ ಕಳೆದಿದೆ**
ದಾವಣಗೆರೆ ಶಿವನಗರ 6ನೇ ಕ್ರಾಸ್, ಡೋರ್ ನಂ. 148 ರ ವಾಸಿಯಾದ ನಾನು ಶ್ರೀ ಅಕ್ತರ್ ಅಲಿ ಬಿನ್ ನೂರುಲ್ಲಾ ನನ್ನ ಪಾಸ್‌ಪೋರ್ಟ್ (ನಂ. M4426492) ಮನೆ ಸ್ವಚ್ಛಗೊಳಿಸುವಾಗ ಕಳೆದುಹೋಗಿರುತ್ತದೆ. ಇದುವರೆಗೂ ಸಿಕ್ಕಿರುವುದಿಲ್ಲ. ಯಾರಿಗಾದರೂ ಸಿಕ್ಕಿದ್ದಲ್ಲಿ ಈ ಕೆಳಗಿನ ನಂಬರ್‌ಗೆ ತಿಳಿಸಲು ಕೋರಿದೆ.
99456 68635 / 80739 93253

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೊರಿಯರ್ ಸೌಲಭ್ಯವಿದೆ.
91084 18233, 97432 17566

**ಹೆಸರು ಬದಲಾವಣೆ**
ಜಗಳೂರು ಟೌನ್ ಜೆ.ಸಿ.ಆರ್.ಬಡಾವಣೆ ವಾಸಿಯಾದ ನೂರ್ ಮಹಮ್ಮದ್ s/o ಬಾಬುಸಾಬ್ ಆದ ನಾನು ನನ್ನ ಮಗಳ ಹೆಸರು "ವರೀಷ.ಎನ್" ಎಂದು ಇದ್ದು, ಜಗಳೂರು ನೋಟರಿಯವರ ಸಮಕ್ಷಮ "ವಾನಿಯಾ ಅಲಿಷಾ.ಎನ್" ಎಂದು ಬದಲಾಯಿಸಿರುತ್ತೇನೆ.
-ನೂರ್ ಮಹಮ್ಮದ್.

**WANTED**
Sales Person for Counter. Male/Female
Parimala Coffee Co
Mandipet, Davangere.
94482 72734

ADMISSION OPEN 2022
**MBBS**
India & Abroad - NEET Required
MCC Screening test must be practice in India
Pharma. D, BSc. Nursing
P.B. BSc (N) D. Pharma
BPT, B.Pharm
B.Sc., MLT, Cardiac, Perfusion, Agri, Radiology
Conditions Apply
99160 67627, 80501 08120

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

# ಸಿಎಪಿಎಫ್, ಎಸ್.ಐ ಹುದ್ದೆಗೆ ಅರ್ಜಿ ಆಹ್ವಾನ

ದಾವಣಗೆರೆ, ಆ. 24- ದೆಹಲಿ ಪೊಲೀಸ್ ಮತ್ತು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ (ಸಿಎಪಿಎಫ್) ಸಬ್‌ಇನ್ಸ್‌ಪೆಕ್ಟರ್ (ಎಸ್.ಐ) ಒಟ್ಟು 4300 (ಪುರುಷ-4019 & ಮಹಿಳೆ-281) ಹುದ್ದೆಗಳ ನೇಮಕಾತಿಗಾಗಿ ಮುಕ್ತ ಸ್ಪರ್ಧಾತ್ಮಕ ಕಂಪ್ಯೂಟರ್ ಆಧಾರಿತ ಪರೀಕ್ಷೆಯನ್ನು ನಡೆಸುತ್ತಿದೆ.

ಈ ಹುದ್ದೆಗಳಿಗೆ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಪಡೆದಿರುವ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ. ಅರ್ಜಿದಾರರು ವೆಬ್‌ಸೈಟ್ ಮೂಲಕ www.ssck-kr.kar.nic.in & https://ssc.nic.in ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಇದೇ ದಿನಾಂಕ 30 ಅರ್ಜಿ ಸಲ್ಲಿಸಲು ಕೊನೆಯ ದಿನ ಮತ್ತು ಅಭ್ಯರ್ಥಿಗಳು 20 ರಿಂದ 25 ವಯೋಮಾನದವರಾಗಿರಬೇಕು. ಎಸ್‌ಸಿ/ಎಸ್‌ಟಿ/ಇಎಸ್‌ಎಂ ಓಬಿಸಿ ನಿರ್ದಿಷ್ಟ ವರ್ಗಗಳಿಗೆ ವಯೋಮಿತಿ ಸಡಿಲಿಕೆ ಇರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ – 080-25502520 / 9483862020, ದೂರವಾಣಿ ಸಂಖ್ಯೆ 08192-259446 ಅಥವಾ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ದಾವಣಗೆರೆ ಇಲ್ಲಿ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

## ಆನ್‌ಲೈನ್‌ನಲ್ಲಿ ಮದ್ಯ ಮಾರಾಟದ ಪ್ರಸ್ತಾಪ ಇಲ್ಲ : ಗೋಪಾಲಯ್ಯ

ಬೆಂಗಳೂರು, ಆ. 24 - ಆನ್‌ಲೈನ್‌ನಲ್ಲಿ ಮದ್ಯ ಮಾರಾಟ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿಲ್ಲ ಎಂದು ಅಬಕಾರಿ ಸಚಿವ ಕೆ.ಗೋಪಾಲಯ್ಯ ಸ್ಪಷ್ಟಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಇಲಾಖೆಯ ಸಚಿವನಾದ ಮೇಲೆ ಇಲ್ಲಿ ಏನೇ ವ್ಯಾಪಾರ ಆದರೂ ಸ್ಥಳೀಯರಿಗೆ ಅನುಕೂಲ ಆಗಬೇಕು ಎನ್ನುವ ಉದ್ದೇಶ ಹೊಂದಿದ್ದೇನೆ ಎಂದರು.

ಆನ್‌ಲೈನ್‌ನಿಂದ ಯಾರೋ ಅಂತರರಾಷ್ಟ್ರೀಯ ಮಾರುಕಟ್ಟೆಯವನು ಬಂದು, 10, 12 ಸಾವಿರ ಕುಟುಂಬಗಳಿಗೆ ಅನ್ಯಾಯ ಆಗೋದು ಬೇಡ. ಇದರಿಂದ 3 ಲಕ್ಷ ಕುಟುಂಬಗಳು ಜೀವನ ಮಾಡುತ್ತಿವೆ. ಈ ಹಿನ್ನೆಲೆಯಲ್ಲಿ ಸದ್ಯಕ್ಕೆ ಆನ್‌ಲೈನ್‌ನಲ್ಲಿ ಮದ್ಯ ಮಾರಾಟ ವಿಚಾರ ಸರ್ಕಾರದ ಮುಂದಿಲ್ಲ ಎಂದು ಸ್ಪಷ್ಟಪಡಿಸಿದರು.

## ಬೇತೂರು : ಇಂದು ಗ್ರಾಪಂ ಜಮಾ ಬಂದಿ

ಬೇತೂರು ಗ್ರಾಮ ಪಂಚಾಯಿತಿಯ ಜಮಾ-ಬಂದಿ ಕಾರ್ಯಕ್ರಮವು ನೋಡಲ್ ಅಧಿಕಾರಿ ಡಾ. ಎ. ಚನ್ನಪ್ಪ ಅವರ ಸಮಕ್ಷಮದಲ್ಲಿ ಬೇತೂರು ಗ್ರಾಮ ಅಧ್ಯಕ್ಷರಾದ ಕೆ.ಸಿ. ಸುಮಾ ಅವರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಬೇತೂರು ಗ್ರಾಮದ ಕರ್ನಾಟಕ ಗ್ರಾಮೀಣ ಬ್ಯಾಂಕ್ ಕಟ್ಟಡದ ಮೇಲ್ಭಾಗದಲ್ಲಿ ನಡೆಯಲಿದೆ ಎಂದು ಪಂಚಾಯ್ತಿ ಪಿಡಿಓ ಪ್ರೇಮಾ ಅವರು ತಿಳಿಸಿದ್ದಾರೆ.

# ಉದ್ಯಮಶೀಲತಾ ಕೌಶಲ್ಯ ಮುಖ್ಯ : ಡಾ.ಎಂ.ಜಿ. ಈಶ್ವರಪ್ಪ



ದಾವಣಗೆರೆ, ಆ.24- ಶೈಕ್ಷಣಿಕ ಚಟುವಟಿಕೆಗಳ ಜೊತೆ ಜೊತೆಗೆ ಉದ್ಯಮಶೀಲತಾ ಸಾಮರ್ಥ್ಯ ಬೆಳೆಸುವ ಕೌಶಲ್ಯಗಳು ವಿದ್ಯಾರ್ಥಿಗಳಿಗೆ ಅತೀ ಮುಖ್ಯ ಎಂದು ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ ಅಭಿಪ್ರಾಯಪಟ್ಟರು.

ಅವರು, ಇಂದು ನಗರದ ಎಆರ್‌ಜಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಆಹಾರ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದರು.

ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಇತರೆ ಚಟುವಟಿಕೆಗಳಲ್ಲೂ ವಿದ್ಯಾರ್ಥಿಗಳು ಬಹಳ ಕ್ರಿಯಾಶೀಲರಾಗಿರುವುದು ಇಂದಿನ ಯುವ ಜನರಿಗೆ ಅಗತ್ಯವಿದೆ. ಇಂತಹ ಆಹಾರ ಮೇಳಗಳು ವಿದ್ಯಾರ್ಥಿಗಳ ಉದ್ಯಮಶೀಲತೆಯ ಕ್ರಿಯಾತ್ಮಕತೆಗೆ ಹಿಡಿದ ಕೈ ಕನ್ನಡಿಯಾಗಿವೆ ಎಂದು ತಿಳಿಸಿದರು.

ದಾವಣಗೆರೆ ಭಾಗದ ವೈವಿಧ್ಯಮಯ ಆಹಾರ ಪದಾರ್ಥಗಳನ್ನು ಸಿದ್ದಪಡಿಸಿ ಮಾರಾಟ ಮಾಡುತ್ತಿರುವ ವಿದ್ಯಾರ್ಥಿಗಳ ಪ್ರಯತ್ನ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಸರ್ಕಾರಿ ಕೆಲಸವನ್ನೇ ನಂಬಿಕೊಂಡರೆ ಸಾಲದು ಸ್ವಂತ ಉದ್ಯೋಗಕ್ಕೂ ಕೂಡ ಇಂತಹ ಮೇಳಗಳು ಪೀಠಿಕೆಯಾಗಲಿವೆ ಎನ್ನುವುದು ಇದರ ಮುಖ್ಯ ಉದ್ದೇಶವಾಗಿದೆ. ಪದವಿ ಪಡೆದ ಮೇಲೂ ಸ್ವಂತ ಉದ್ಯೋಗ ಮಾಡಿಕೊಳ್ಳಬಹುದು. ಅದಕ್ಕೆ ಈ ಆಹಾರ ಮೇಳ ಸಣ್ಣ ತರಬೇತಿ ಇದ್ದಂತೆ ಎಂದು ಹೇಳಿದರು.

ಶೈಕ್ಷಣಿಕ ಅರ್ಹತೆ ವೃದ್ಧಿಯ ಜೊತೆಗೆ ಈ ರೀತಿಯ ಉದ್ಯೋಗ ವೃದ್ಧಿಯನ್ನು ಮಾಡಿಕೊಳ್ಳಲು ಇದು ಸಹಕಾರಿಯಾಗಲಿದೆ. ಇದರಲ್ಲಿ ವಿದ್ಯಾರ್ಥಿಗಳ ಉತ್ಸಾಹ ಗಮನ ಸೆಳೆಯುತ್ತದೆ. ಇದರಲ್ಲಿ ಕೇವಲ ವಿದ್ಯಾರ್ಥಿಗಳಷ್ಟೇ ಅಲ್ಲದೇ ಸಾರ್ವಜನಿಕರು ವ್ಯವಹಾರಕ್ಕೆ ಬಂದರೆ ಇನ್ನಷ್ಟು ಉತ್ಸಾಹ ಬರಲಿದೆ ಎಂದರು.

ಕಾಲೇಜಿನ ಆವರಣದಲ್ಲಿ 15 ಮಳಿಗೆಗಳಲ್ಲಿ ರಾಗಿ, ಜೋಳದ ರೊಟ್ಟಿ, ವಿವಿಧ ಬಗೆಯ ಚಟ್ನಿ, ಆಪಲ್ ಕೇಕ್, ಗೋಬಿ, ಪಾನಿಪೂರಿ, ಡೋಲಿ ರೈಸ್, ವೆಜ್ ಪಲಾವ್, ಜಾಮೂನು, ಲಸ್ಸಿ, ತರಕಾರಿ ಸಲಾಡ್, ಬ್ರೆಡ್ ಟೋಸ್ಟ್, ಹಣ್ಣು ಮತ್ತು ತರಕಾರಿ ಸಲಾಡ್, ಮಂಡಕ್ಕಿ-ಮೆಣಸಿನಕಾಯಿ ಬೋಂಡಾ ಮತ್ತು ಟೀ, ಬೀಡಾ, ಕೊಬ್ಬರಿ ಚಿನ್ನಿ, ಪಾಪ್ ಕಾರ್ನ್, ಮೈಸೂರು ಮಜ್ಜಿಗೆ, ಎಳ್ಳಿನ ಚಿಗಳಿ, ಪಿಂಕ್ ಲಾಡು, ಕೋಲ್ಡ್ ಬಾದಾಮಿ ಹಾಲು, ಎಗ್ ರೈಸ್ ಸೇರಿದಂತೆ ಮೊದಲಾದ ಖಾದ್ಯಗಳು ಬಾಯಲ್ಲಿ ನೀರೂರಿಸಿದವು.

ಡಾ. ಎಂ.ಜಿ. ಈಶ್ವರಪ್ಪ ಅವರು ಎಲ್ಲಾ ಮಳಿಗೆಗಳಿಗೂ ತೆರಳಿ ಖಾದ್ಯಗಳ ರುಚಿಯ ಸವಿದು ವಿದ್ಯಾರ್ಥಿಗಳ ಪ್ರಯತ್ನಕ್ಕೆ ಪ್ರಶಂಸಿಸಿದರು.

**ಎಆರ್‌ಜಿ ಕಾಲೇಜಿನಲ್ಲಿ ಆಹಾರ ಮೇಳ**

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರುಗಳಾದ ಪ್ರೊ. ಕೆ.ಎಸ್. ಬಸವರಾಜಪ್ಪ, ಬೊಮ್ಮಣ್ಣ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಜೆ.ಕೆ. ಮಲ್ಲಿಕಾರ್ಜುನಪ್ಪ, ವಾಣಿಜ್ಯ ಶಾಸ್ತ್ರ ವಿಭಾಗದ ಪ್ರೊ. ಅನಿತಾಕುಮಾರಿ, ಸ್ನಾತಕೋತ್ತರ ವಿಭಾಗದ ಲೋಕೇಶ್ ರೆಡ್ಡಿ, ಕನ್ನಡ ವಿಭಾಗದ ಡಾ. ಹೆಚ್.ಆರ್. ತಿಪ್ಪೇಸ್ವಾಮಿ, ಗ್ರಂಥಾಲಯ ವಿಭಾಗದ ಡಾ. ಚಮನ್ ಸಾಬ್, ವಾಣಿಜ್ಯ ಶಾಸ್ತ್ರ ವಿಭಾಗದ ಪ್ರೊ. ರಶ್ಮಿ ನಾಗರಾಜ್, ಹೀನಾಕೌಸರ್, ಸುಮ, ಬಸವರಾಜ್ ಕಲಹಟ್ಟಿ, ಡಿ.ಬಿ. ಬಸವರಾಜ್, ಕವಿತಾ ಪಾಟೀಲ್, ಪ್ರದೀಪ್, ಕರಿಬಸಪ್ಪ, ರವಿ ಸೇರಿದಂತೆ ಇತರರು ಇದ್ದರು.

# ಆರೋಗ್ಯಕರ ವಾತಾವರಣ ನಿರ್ಮಾಣ ಸರ್ಕಾರದ ಹೊಣೆ

## ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆದ ನ್ಯಾಯಮೂರ್ತಿ ಪ್ರವೀಣ್ ನಾಯಕ



ದಾವಣಗೆರೆ, ಆ. 24 - ಮಕ್ಕಳು ಆರೋಗ್ಯಕರ ವಾತಾವರಣದಲ್ಲಿ ಬೆಳೆಯಬೇಕು. ಅವರಿಗೆ ಸ್ವತಂತ್ರ ಹಾಗೂ ಘನತೆಯ ವಾತಾವರಣ ಕಲ್ಪಿಸಬೇಕು ಎಂಬುದು ಸರ್ಕಾರದ ಮೇಲಿರುವ ಸಾಂವಿಧಾನಿಕ ಬದ್ಧತೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆಗಿರುವ ಹಿರಿಯ ಸಿವಿಲ್ ನ್ಯಾಯಮೂರ್ತಿ ಪ್ರವೀಣ್ ನಾಯಕ ತಿಳಿಸಿದ್ದಾರೆ.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾಡಳಿತ, ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಸ್ಥೆ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ ಕುರಿತ ಕಾನೂನು ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ಬಡತನದ ಕಾರಣದಿಂದಾಗಿ ವಯಸ್ಸಿಗೆ ಮೀರಿದ ಕೆಲಸದಲ್ಲಿ ತೊಡಗಿಕೊಳ್ಳದಂತೆ ತಡೆಯುವುದು ಸರ್ಕಾರದ ಜವಾಬ್ದಾರಿಯಾಗಿದೆ. ಈ ದಿಸೆಯಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮಕ್ಕಳಿಗೆ ಅಗತ್ಯವಾದ ಉಚಿತ ಕಾನೂನು ಸೇವೆ ಒದಗಿಸುತ್ತಿದೆ ಎಂದವರು ಹೇಳಿದರು.

ಬಾಲಕಾರ್ಮಿಕ ಪಿಡುಗಿಗೆ ಸಿಲುಕಿದವರು ಶಿಕ್ಷಣದಿಂದ ವಂಚಿತರಾಗುತ್ತಾರೆ. ಮುಂದಿನ ದಿನಗಳಲ್ಲಿ ದೈಹಿಕ ಹಾಗೂ ಆರ್ಥಿಕ ತೊಂದರೆಗಳನ್ನು ಎದುರಿಸುತ್ತಾರೆ. ಬಾಲ ಕಾರ್ಮಿಕ ಪದ್ಧತಿಯೂ ಮಾನವ ಕಳ್ಳಸಾಗಣೆಗೆ ದಾರಿ ಮಾಡಿಕೊಡುತ್ತದೆ ಎಂದವರು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬಳ್ಳಾರಿ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರಾದ ಎಸ್.ಆರ್. ವೀಣಾ, ದೇಶದ ಅಭಿವೃದ್ಧಿಗೆ ಬಾಲಕಾರ್ಮಿಕ ಪದ್ಧತಿ ತೊಡಕಾಗಿದೆ. ಈ ಪಿಡುಗು ನಿವಾರಿಸುವ ಹೊಣೆ ಸಮಾಜದ ಮೇಲಿದೆ. ಕಾರ್ಮಿಕ ಇಲಾಖೆಯಷ್ಟೇ ಇಲ್ಲದೇ, ಸರ್ಕಾರದ 13 ಇಲಾಖೆಗಳಿಗೆ ಬಾಲ ಕಾರ್ಮಿಕ ಪದ್ಧತಿ ತಪ್ಪಿಸುವ ಹೊಣೆ ಇದೆ ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಶಿಕ್ಷಣ ಅಧಿಕಾರಿ ಡಾ. ಸುರೇಶ್ ಬಾರ್ಕಿ ಮಾತನಾಡಿ, ಬಡತನದ ಕಾರಣ ಕ್ಕಾಗಿ ಮಕ್ಕಳು ಬಾಲಕಾರ್ಮಿಕರಾಗದಂತೆ ತಡೆ ಯುವ ಹೊಣೆ ತಂದೆ - ತಾಯಿಗಳ ಮೇಲಿದೆ. ಪೋಷಕರು ಕುಟುಂಬ ಯೋಜನೆ ಪಾಲಿಸಿದರೆ ಆರ್ಥಿಕ ಹೊರೆ ಕಡಿಮೆಯಾಗುತ್ತದೆ. ಇದು ಬಾಲಕಾರ್ಮಿಕ ಪದ್ಧತಿ ತಡೆಯಲು ನೆರವಾಗುತ್ತದೆ ಎಂದರು.

ವೇದಿಕೆಯ ಮೇಲೆ ಅಭಿಯೋಗದ ಉಪ ನಿರ್ದೇಶಕರ ಕಚೇರಿಯ ಹಿರಿಯ ಕಾನೂನು ಅಧಿಕಾರಿ ಕೆ.ಜಿ. ಕಲ್ಪನ, ಕಾರ್ಮಿಕ ಅಧಿಕಾರಿ ಜಿ. ಇಬ್ರಾಹಿಂ ಸಾಬ್, ವಕೀಲೆ ಕೆ. ಮಂಜುಳ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ನಿರ್ದೇಶಕ ಇ.ಎನ್. ಪ್ರಸನ್ನ ಮತ್ತಿತರರು ಉಪಸ್ಥಿತರಿದ್ದರು.

# ಜಲಸಿರಿ ಕಾಮಗಾರಿ ವೀಕ್ಷಿಸಿದ ಸಂಸದ ಸಿದ್ದೇಶ್ವರ



ದಾವಣಗೆರೆ,ಆ.24- ಮಹಾನಗರ ಪಾಲಿಕೆ ವ್ಯಾಪ್ತಿಯ ನಾಗರಿಕರಿಗೆ ಕೆಯುಐಡಿಎಫ್‌ಸಿಯಿಂದ ಅನುಷ್ಠಾನಗೊಳ್ಳುತ್ತಿರುವ ನಿರಂತರ ಕುಡಿಯುವ ನೀರು ಸರಬರಾಜು ಯೋಜನೆಯಡಿ (ಜಲಸಿರಿ) ಕಾಮಗಾರಿಯ ಸ್ಥಳ ಪರಿವೀಕ್ಷಣೆಯನ್ನು ತರಳಬಾಳು ಬಡಾವಣೆ ಮತ್ತು ವಿದ್ಯಾನಗರಗಳಲ್ಲಿ ಸಂಸದ ಜಿ. ಎಂ. ಸಿದ್ದೇಶ್ವರ ಮಾಡಿದರು.

ಈ ಸಂದರ್ಭದಲ್ಲಿ ಮೇಲ್ಮಟ್ಟದ ಜಲ ಸಂಗ್ರಹಗಾರಗಳಿಂದ ಮನೆ ಮನೆಗಳಿಗೆ ನೀರು ಸರಬರಾಜು ಮಾಡುವ ಪ್ರಾತ್ಯಕ್ಷಿಕೆಯನ್ನು ಮಾಡಿ ಎಲ್ಲಾ ಮನೆಗಳಿಗೂ ಸರಿಯಾಗಿ ನೀರು ಬರುವ ಬಗ್ಗೆ ಖಚಿತಪಡಿಸಿಕೊಂಡು, ಸಾರ್ವಜನಿಕರೊಂದಿಗೆ ಸಂವಾದ ನಡೆಸಿದರು. ಸ್ಥಳದಲ್ಲಿ ಹಾಜರಿದ್ದ ಇಂಜಿನಿಯರುಗಳಿಗೆ ವಿದ್ಯಾನಗರ, ತರಳಬಾಳು ಬಡಾವಣೆ, ಆಂಜನೇಯ ಬಡಾವಣೆ ವ್ಯಾಪ್ತಿಯ ನಾಗರಿಕರಿಗೆ ಜಲಸಿರಿ ಯೋಜನೆಯಡಿ ನೀರು ಕೊಡುವ ಕ್ರಮವನ್ನು ಕೂಡಲೇ ಕೈಗೊಳ್ಳಬೇಕೆಂದು ಸೂಚಿಸಿದರು ಹಾಗೂ ಯಾವ ಮನೆಗಳಿಗೆ ಜಲಸಿರಿ ಯೋಜನೆಯಡಿ ನಲ್ಲಿ ಸಂಪರ್ಕವನ್ನು ಕಲ್ಪಿಸಿಲ್ಲವೋ ಅಂತಹ ಮನೆಗಳಿಗೆ ನಲ್ಲಿ ಸಂಪರ್ಕವನ್ನು ಕಲ್ಪಿಸಿ ನೀರು ಕೊಡಲು ಸೂಚಿಸಿದರು.

ಮೂರೂ ವಲಯಗಳಲ್ಲಿ ಮನೆ ಮನೆಗೆ ನಲ್ಲಿ ಸಂಪರ್ಕ ಕಾರ್ಯ ಪೂರ್ಣವಾಗಿದ್ದು, ಸೆಪ್ಟೆಂಬರ್ ಮೊದಲ ವಾರದಲ್ಲಿ ಈ ಮೂರೂ ವಲಯಗಳಲ್ಲಿ ನಿರಂತರ ಕುಡಿಯುವ ನೀರು ಸರಬರಾಜು ಯೋಜನೆಗೆ ಅಧಿಕೃತ ಚಾಲನೆ ನೀಡಲಾಗುವುದು ಎಂದು ಕಾರ್ಯಪಾಲಕ ಅಭಿಯಂತರ ಕೆ.ಮಂಜುನಾಥ್ ತಿಳಿಸಿದರು.

ಈ ಸಂದರ್ಭದಲ್ಲಿ ಸ್ಥಳೀಯ ಪಾಲಿಕೆ ಸದಸ್ಯ ಶ್ರೀಮತಿ ಗೀತಾ ದಿಳ್ಳೆಪ್ಪ, ಜಿಲ್ಲಾಧಿಕಾರಿ ಶಿವಾನಂದ ಕಪಾಸಿ, ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ, ಜಲಸಿರಿ ಯೋಜನೆ ಕಾರ್ಯಪಾಲಕ ಇಂಜಿನಿಯರ್ ಕೆ. ಮಂಜುನಾಥ್, ಮಾಜಿ ಮೇಯರ್ ಕೆ.ಆರ್. ವಸಂತಕುಮಾರ್ ಹಾಜರಿದ್ದರು.

# ಹಳೇಬಾತಿ : ಜ್ಞಾನ ವಿಕಾಸ ಕೇಂದ್ರಕ್ಕೆ ಚಾಲನೆ



ದಾವಣಗೆರೆ, ಆ. 24- ತಾಲ್ಲೂಕಿನ ಕಡ್ಲೇಬಾಳು ವಲಯ ವ್ಯಾಪ್ತಿಯ ಹಳೇಬಾತಿ ಗ್ರಾಮದಲ್ಲಿ ನೂತನ ಜ್ಞಾನ ವಿಕಾಸ ಕೇಂದ್ರದ ಉದ್ಘಾಟನೆಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ತಾಲ್ಲೂಕು ಒಕ್ಕೂಟದ ಅಧ್ಯಕ್ಷೆ ಶಕುಂತಲಾ ಉದ್ಘಾಟಿಸಿದರು.

ಇದೇ ವೇಳೆ ಮಾತನಾಡಿದ ಅವರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ಮಹಿಳೆಯರಿಗೆ ಉತ್ತಮ ಕಾರ್ಯಕ್ರಮಗಳನ್ನು ರೂಪಿಸುತ್ತಿರುವುದು ಹೆಮ್ಮೆಯ ವಿಚಾರ. ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಲಾಗುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಗ್ರಾಮ ಪಂಚಾಯತಿ ಅಧ್ಯಕ್ಷ ಕೆಂಚಪ್ಪ ಬೇವಿನಹಳ್ಳಿ ಮಾತನಾಡಿದರು. ಸದಸ್ಯರಾದ ಎಸ್.ಎಸ್. ಪ್ರಭು, ಮುಖಂಡ ಅಂಜಿನಪ್ಪ, ಕೃಷಿ ಮೇಲ್ವಿಚಾರಕ ವಿಜಯಕುಮಾರ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಡಾ. ಮಹೇಶ್, ಆಂಜನೇಯ ದೇವಸ್ಥಾನ ಸಮಿತಿ ಸದಸ್ಯರಾದ ಹನುಮಂತಪ್ಪ, ಚಂದ್ರಪ್ಪ, ರಮೇಶ್ ಮತ್ತಿತರರು ಭಾಗವಹಿಸಿದ್ದರು. ವಲಯ ಮೇಲ್ವಿಚಾರಕಿ ಲಕ್ಷ್ಮಿ ಸ್ವಾಗತಿಸಿದರು.

ಬೆಳಕು, ನಕ್ಷತ್ರ, ಶ್ರೀ ರೇವಣಸಿದ್ಧೇಶ್ವರ ಜ್ಞಾನವಿಕಾಸ ಕೇಂದ್ರಗಳಿಗೆ ಚಾಲನೆ ನೀಡಲಾಯಿತು.

# ನಗರದಲ್ಲಿ ಇಂದು ಪುಸ್ತಕ ಮಾರಾಟ ಅಭಿಯಾನ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಇದೇ ದಿನಾಂಕ 29 ರವರೆಗೆ ಎಲ್ಲಾ ಜಿಲ್ಲೆಗಳಲ್ಲಿ ಅಮೃತ ಭಾರತಿಗೆ ಕನ್ನಡದಾರತಿ ಅಂಗವಾಗಿ ಅಮೃತ ಪುಸ್ತಕ ಮಾರಾಟ ಅಭಿಯಾನ ನಡೆಯಲಿದೆ. ಈ ಅಭಿಯಾನವು ಇಂದು ಬೆಳಿಗ್ಗೆ 10 ಗಂಟೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಮಧ್ಯಾಹ್ನ 12ಕ್ಕೆ ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯ ಅಕಾಡೆಮಿಯ ಎಲ್ಲಾ ಪುಸ್ತಕಗಳನ್ನು ಶೇ.50ರ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುವುದು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕ (ತ್ಯಾಗ ಬಲಿದಾನಗಳ ಕಥಾನಕ) ಎಂಬ 28 ನಿಮಿಷಗಳ ಸಾಕ್ಷ್ಯಚಿತ್ರ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ರಿಜಿಸ್ಟ್ರಾರ್ ಕರಿಯಪ್ಪ ಎನ್. ತಿಳಿಸಿದ್ದಾರೆ.

## ವಿಕಲಚೇತನರ ಆಧಾರ ಸಾಲ ಯೋಜನೆ ಅವಧಿ ವಿಸ್ತರಣೆ

ದಾವಣಗೆರೆ ಆ.24- ಆಧಾರ ಸಾಲ ಯೋಜನೆಯಡಿ ಸ್ವಯಂ ಉದ್ಯೋಗ ಕೈಗೊಳ್ಳುವ ವಿಕಲಚೇತನರಿಗೆ ಸಾಲ ಸೌಲಭ್ಯ ಯೋಜನೆಗೆ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಇದೇ ದಿನಾಂಕ 31 ರವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಪುನರ್ವಸತಿ ಕಾರ್ಯಕರ್ತರಾದ ಹೊನ್ನಾಳಿ-ಶೈಲಜಾ ಕೆ.ಎಂ. (9886366809), ಚನ್ನಗಿರಿ- ಕೆ. ಸುಬ್ರಮಣ್ಯಂ (9945738141), ಜಗಳೂರು -ಎಂ.ಕೆ. ಶಿವನಗೌಡ (9902105734), ಹರಿಹರ- ಶಶಿಕಲಾ ಟಿ. (9945458058), ದಾವಣಗೆರೆ- ಚನ್ನಪ್ಪ ಬಿ. (9590829024) ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ತಿಳಿಸಿದ್ದಾರೆ.

## ನಿಟುವಳ್ಳಿಯಲ್ಲಿ ಇಂದು ಪರಿಸರ ಸ್ನೇಹಿ ಗಣೇಶಹಬ್ಬ ಆಚರಣೆ ಜಾಗೃತಿ ಶಿಬಿರ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ದಾವಣಗೆರೆ, ಹೊಳಲ್ಕೆರೆ ನಿಸರ್ಗ ಫೌಂಡೇಷನ್ ಹಾಗೂ ನಿಟುವಳ್ಳಿಯ ಸರ್ಕಾರಿ ಪ್ರೌಢಶಾಲೆ, ಆರ್‌ಎಂಎಸ್‌ಎ ಇವರ ಸಂಯುಕ್ತಾಶ್ರಯದಲ್ಲಿ 'ಪರಿಸರ ಸ್ನೇಹಿ ಗಣೇಶಹಬ್ಬ ಆಚರಣೆಯ ಜಾಗೃತಿ ಶಿಬಿರ' ಕಾರ್ಯಕ್ರಮ ಇಂದು ಮಧ್ಯಾಹ್ನ 2 ಗಂಟೆಗೆ ನಿಟ್ಟುವಳ್ಳಿಯ ಆರ್‌ಎಂಎಸ್‌ಎ ಸರ್ಕಾರಿ ಪ್ರೌಢಶಾಲೆ ಸಭಾಂಗಣದಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಪರಿಸರ ಅಧಿಕಾರಿ ಮಂಜಪ್ಪ ಉದ್ಘಾಟಿಸಲಿದ್ದು, ಪಿ.ಹೆಚ್‌ಡಿ ಪ್ರಾಧ್ಯಾಪಕ ಡಾ. ಹೆಚ್.ಕೆ. ಸ್ವಾಮಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಳ್ಳಲಿದ್ದಾರೆ. ಮುಖ್ಯಅತಿಥಿಗಳಾಗಿ ಶಿಕ್ಷಕ ಕೆ.ಟಿ. ಜಯ್ಯಪ್ಪ, ನಿಸರ್ಗ ಫೌಂಡೇಷನ್ ಅಧ್ಯಕ್ಷ ಟಿ.ಹೆಚ್. ವಸಂತ್ ಭಾಗವಹಿಸಲಿದ್ದಾರೆ. ಸರ್ಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕ ಎಂ. ಸುರೇಶ್ ಅಧ್ಯಕ್ಷತೆ ವಹಿಸುವರು.

# ವೈ.ರಾಮಪ್ಪ ಉಚ್ಚಾಟನೆ ಶಿಫಾರಸ್ಸು ಹಿಂಪಡೆಯಲಿ

ದಾವಣಗೆರೆ, ಆ. 24- ದಲಿತ ನಾಯಕನ ರಾಜಕೀಯ ಬೆಳವಣಿಗೆ ಸಹಿಸಲಾಗದೇ ಡಾ.ವೈ.ರಾಮಪ್ಪ ಅವರನ್ನು ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ಕರ್ನಾಟಕ ದಲಿತ ಭೋವಿ ಸಂಘರ್ಷ ಸಮಿತಿ ರಾಜ್ಯಾಧ್ಯಕ್ಷ ಗೌತಮ್ ವೆಂಕಿ ಅವರು ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದ್ದಾರೆ.

ಕೂಡಲೇ ಉಚ್ಚಾಟನೆ ಶಿಫಾರಸ್ಸು ಹಿಂಪಡೆಯಬೇಕು ಎಂದು ಒತ್ತಾಯಿಸಿದ ಅವರು, ಕಳೆದ 35 ವರ್ಷಗಳಿಂದ ರಾಮಪ್ಪ ಅವರು ಪಕ್ಷಕ್ಕಾಗಿ ಪ್ರಾಮಾಣಿಕ ಹಾಗೂ ನಿಷ್ಠೆಯಿಂದ ಕೆಲಸ ಮಾಡಿ ದ್ದಾರೆ. ಈ ಬಗ್ಗೆ ಕೆಪಿಸಿಸಿ ಹಾಗೂ ರಾಷ್ಟ್ರೀಯ ಮುಖಂಡ ರಾಹುಲ್ ಗಾಂಧಿ ಅವರ ಗಮನಕ್ಕೂ ತರಲಾಗುವುದು ಎಂದರು.

ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಪಕ್ಷದ ಜಿಲ್ಲಾಧ್ಯಕ್ಷ ಹೆಚ್.ಮಂಜಪ್ಪ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಬೇಕು ಎಂದಿರುವ ಅವರು, ರಾಜ್ಯ ಕಾಂಗ್ರೆಸ್ ಪಕ್ಷದ ಬೆಂಗಳೂರು ಕಚೇರಿ ಮುಂದೆ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಂದು ಹೇಳಿದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಹೆಗ್ಗೆರೆ ರಂಗಪ್ಪ ಮಾತನಾಡಿ, ಅಧ್ಯಕ್ಷರು ಪಕ್ಷ ಒಗ್ಗೂಡಿಸುವ ಕೆಲಸ ಬಿಟ್ಟು ವಿಘಟನೆ ಮಾಡುತ್ತಿದ್ದಾರೆ. ಇದರಿಂದ ಚುನಾವಣೆಗೆ ಯಾವ ರೀತಿ ಸಂದೇಶ ಕೊಡುತ್ತಿದ್ದಾರೆ? ಇದು ಸಾಮಾಜಿಕ ನ್ಯಾಯವೇ? ಎಂದು ಪ್ರಶ್ನಿಸಿದರು.

ಜಿಲ್ಲಾ ಭೋವಿ ಸಮಾಜದ ಅಧ್ಯಕ್ಷ ಶ್ರೀನಿವಾಸ ಪಿ, ಚೌಡಪ್ಪ, ಚನ್ನಬಸಪ್ಪ ಹೂವಿನಮಡು, ಎಸ್. ಹನುಮಂತಪ್ಪ, ಆಟೋ ಕಾಲೋನಿ ತಿಮ್ಮಣ್ಣ, ಶಂಕರಪ್ಪ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

**ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**
ನಂ. 751, ತುಳಸಿ ಕಾಂಪ್ಲೆಕ್ಸ್, 1ನೇ ಮಹಡಿ, ವಸಂತ ರಸ್ತೆ, ದಾವಣಗೆರೆ.
ರಿ.ನಂ.ಎ.ಆರ್. 31, ಆರ್.ಜಿ.ಎನ್. 23240 / 97-98 ತಾ. 1.7.1997

**ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ**

ಮಾನ್ಯ ಸದಸ್ಯರಲ್ಲಿ ಈ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ, ನಮ್ಮ ಸೊಸೈಟಿಯು 25ನೇ ವರ್ಷದ ಬೆಳ್ಳಿ ಮಹೋತ್ಸವ ಆಚರಣೆ ಮಾಡುತ್ತಿದ್ದು, ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರಣ, 2021-22 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ.ಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕ ಪಡೆದು ತೇರ್ಗಡೆಯಾದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಆಡಳಿತ ಮಂಡಳಿ ತೀರ್ಮಾನಿಸಿದೆ.

ಆದ್ದರಿಂದ ದಿನಾಂಕ 30.08.2022ರೊಳಗೆ (ಸದಸ್ಯರ ಮಕ್ಕಳ) ವಿದ್ಯಾರ್ಥಿಗಳ ಅಂಕಪಟ್ಟಿ, ಆಧಾರ್ ಕಾರ್ಡ್, 2 ಪಾಸ್‌ಪೋರ್ಟ್ ಸೈಜ್ ಫೋಟೋ ಮತ್ತು ಪೋಷಕರ ಸದಸ್ಯತ್ವದ ಗುರುತಿನ ಚೀಟಿಯನ್ನು ಮುಖ್ಯ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ನಂ. 95908 07050, 08192 271472ಗೆ ಸಂಪರ್ಕಿಸಿ.

ಸಹಿ/- ಕಾರ್ಯದರ್ಶಿ, ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ., ದಾವಣಗೆರೆ.

# ಮೇಲ್ಜಾತಿಯ ದೇವರು ಇಲ್ಲ ಎಂದಿದ್ದು ಅಂಬೇಡ್ಕರ್ : ಜೆಎನ್‌ಯು ಕುಲಪತಿ

ನವದೆಹಲಿ, ಆ. 24 – ಮೇಲ್ಜಾತಿಯ ಯಾವುದೇ ದೇವರು ಇಲ್ಲ ಎಂಬ ಹೇಳಿಕೆ ನೀಡಿದ ನಂತರ ವಿವಾದಕ್ಕೆ ಗುರಿಯಾಗಿದ್ದ ಜೆ.ಎನ್.ಯು. ಕುಲಪತಿ ಸಂತಿಶ್ರೀ ಧುಲಿಪುಡಿ ಪಂಡಿತ್ ಸ್ಪಷ್ಟನೆ ನೀಡಿದ್ದು, ತಮ್ಮ ಹೇಳಿಕೆಯನ್ನು ತಿರುಚಲಾಗಿದೆ ಎಂದಿದ್ದಾರೆ.

ಅಂಬೇಡ್ಕರ್ ಅವರು ಲಿಂಗ ನ್ಯಾಯದ ಕುರಿತು ಹೊಂದಿದ್ದ ನಿಲುವುಗಳ ಬಗ್ಗೆ ಮಾತನಾಡಲು ತಿಳಿಸಲಾಗಿತ್ತು. ಹೀಗಾಗಿ ನಾನು ಅಂಬೇ ಡ್ಕರ್ ಅವರು ದೇವರ ಕುರಿತು ಹೇಳಿದ ಮಾತುಗಳನ್ನು ಉಲ್ಲೇಖಿಸಿದ್ದೆ ಎಂದು ಹೇಳಿದ್ದಾರೆ.

ನಾನು ಅಂಬೇಡ್ಕರ್ ಹೇಳಿದ್ದನ್ನೇ ಉಲ್ಲೇಖಿಸಿದ್ದೇನೆ. ಜನರು ಏಕೆ ನನ್ನ ಬಗ್ಗೆ ಕೋಪಗೊಳ್ಳಬೇಕು? ಅವರು ಅಂಬೇಡ್ಕರ್ ಕುರಿತು ಕೋಪಗೊಳ್ಳಬೇಕು ಎಂದು ಪಂಡಿತ್ ಹೇಳಿದ್ದಾರೆ. ಡಾ. ಬಿ.ಆರ್. ಅಂಬೇಡ್ಕರ್ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಮೇಲ್ಜಾತಿಗೆ ಸೇರಿದ ದೇವರು ಇಲ್ಲ. ಶಿವ ದೇವರೂ ಸಹ ಪರಿಶಿಷ್ಟ ಜಾತಿ, ಇಲ್ಲವೇ ಪಂಗಡಕ್ಕೆ ಸೇರಿದವರಾಗಿರಬೇಕು ಎಂದಿದ್ದರು.

## ನಗರದಲ್ಲಿ ಇಂದಿನ 'ಸಾಧ್ವಿ ಸರಸ್ವತಿ' ಮುಂದಕ್ಕೆ

ಶ್ರೀ ಗುರು ವಾದ್ಯವೃಂದ ಮತ್ತು ಶ್ರೀ ಸಂಚಾರಿ ಕೆ.ಬಿ.ಆರ್. ಡ್ರಾಮಾ ಕಂಪನಿ ವತಿಯಿಂದ ಕುವೆಂಪು ಕನ್ನಡ ಭವನದಲ್ಲಿ ಇಂದು ನಡೆಯಬೇಕಿದ್ದ 'ಸಾಧ್ವಿ ಸರಸ್ವತಿ' ನಾಟಕ ಪ್ರದರ್ಶನವನ್ನು ಸೆಪ್ಟೆಂಬರ್ 8ರ ಗುರುವಾರಕ್ಕೆ ಮುಂದೂಡಲಾಗಿದೆ ಎಂದು ಚಿಂದೋಡಿ ಶಂಭುಲಿಂಗಪ್ಪ ತಿಳಿಸಿದ್ದಾರೆ.

**ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್**
ಆಡಳಿತ ಕಛೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ–577001

**ಬ್ಯಾಂಕಿನ ಸದಸ್ಯರ ಗಮನಕ್ಕೆ**

ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ, ಬ್ಯಾಂಕಿನ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೆ, ಬ್ಯಾಂಕಿನ ಹಿಂದಿನ ವರ್ಷದ ವಾರ್ಷಿಕ ಸಾಮಾನ್ಯ ಸಭೆಗೆ ಬ್ಯಾಂಕಿನಿಂದ ವಾರ್ಷಿಕ ವರದಿ ಪುಸ್ತಕಗಳನ್ನು ಅಂಚೆ ಮೂಲಕ ಕಳುಹಿಸಲಾಗಿತ್ತು. ಆದರೆ ವಾರ್ಷಿಕ ವರದಿ ಪುಸ್ತಕಗಳು ವಿಳಾಸ ಸರಿ ಇಲ್ಲದೇ ಹಿಂತಿರುಗಿ ಬಂದಿರುತ್ತವೆ. ಆದ್ದರಿಂದ ಮಾನ್ಯ ಸದಸ್ಯರು 2021-22ನೇ ಸಾಲಿನ ವಾರ್ಷಿಕ ವರದಿ ಪುಸ್ತಕಗಳನ್ನು ಕಳುಹಿಸುವ ಮುಂಚಿತವಾಗಿ ಬ್ಯಾಂಕಿನ ಕೆಲಸದ ವೇಳೆಯಲ್ಲಿ ಖುದ್ದಾಗಿ ಬಂದು ತಮ್ಮ ಸರಿಯಾದ ವಿಳಾಸವನ್ನು ನೀಡಿ, ಬ್ಯಾಂಕಿನ ತಮ್ಮ ಸದಸ್ಯತ್ವದ ವಿಳಾಸವನ್ನು ಸರಿಪಡಿಸಿಕೊಳ್ಳಬೇಕಾಗಿ ತಿಳಿಸಿದೆ.

ಜಿ.ವಿ. ಶಿವಶಂಕರ್ — ಪ್ರಧಾನ ವ್ಯವಸ್ಥಾಪಕರು
ಡಾ. ಶಾಮನೂರು ಶಿವಶಂಕರಪ್ಪ — ಅಧ್ಯಕ್ಷರು

**ಜನ್ಮದಿನದ ಶುಭಾಶಯಗಳು**





ರಾಣೇಬೆನ್ನೂರಿನ ಜನಪ್ರಿಯ ಶಾಸಕರಾದ
**ಸನ್ಮಾನ್ಯ ಶ್ರೀ ಅರುಣಕುಮಾರ ಪೂಜಾರ**
ಅವರ ಹುಟ್ಟುಹಬ್ಬದ ಸಮಾರಂಭಕ್ಕೆ ಆಗಮಿಸುತ್ತಿರುವ
ಎಲ್ಲಾ ಗಣ್ಯರಿಗೆ, ಅಭಿಮಾನಿಗಳಿಗೆ, ಬಿಜೆಪಿ ಕಾರ್ಯಕರ್ತರಿಗೆ
**ಸ್ವಾಗತ-ಸುಸ್ವಾಗತ...**
**ಅಭಿಮಾನಿ ಬಳಗ, ರಾಣೇಬೆನ್ನೂರು.**

## ಬಿಎಸ್ಸೆನ್ನೆಲ್‌ನಿಂದ ಭರ್ಜರಿ ಕೊಡುಗೆ

ದಾವಣಗೆರೆ, ಆ. 24- 75ನೇ ವರ್ಷದ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಅಂಗವಾಗಿ ಬಿಎಸ್ಸೆನ್ನೆಲ್‌ನಿಂದ ಭರ್ಜರಿ ಕೊಡುಗೆಯನ್ನು ಪಡೆದುಕೊಳ್ಳಬಹುದು. ಈ ಮುಂಚೆ ಇದ್ದ ರೂ.449 ಮತ್ತು ರೂ.599 ಪ್ಲಾನ್‌ಗಳನ್ನು ಈಗ ಕೇವಲ 275ರೂ. 75 ದಿನಗಳಿಗೆ ಈ ಕೊಡುಗೆ ಕೇವಲ ಸೆಪ್ಟಂಬರ್ 15 ರವರೆಗೆ ಸೀಮಿತವಾಗಿರುತ್ತದೆ. ವಿವರಕ್ಕೆ bsnl.co.in or bookmyfiber.bsnl.co.in ಅಥವಾ ಬಿಎಸ್ಸೆನ್ನೆಲ್ ಗ್ರಾಹಕರ ಸೇವಾ ಕೇಂದ್ರಗಳಿಗೆ ಭೇಟಿ ನೀಡಬಹುದಾಗಿದೆ.

## ಹರಿಹರದಲ್ಲಿ ನಾಳೆ ಪಲ್ಲಕ್ಕಿ ಉತ್ಸವ

ಹರಿಹರ, ಆ.24- ನಗರದ ಕ್ಷೇತ್ರನಾಥ ಶ್ರೀ ವೀರಭದ್ರೇಶ್ವರ ಸ್ವಾಮಿ ಗುಗ್ಗುಳ, ಪಲ್ಲಕ್ಕಿ ಉತ್ಸವ ನಾಡಿದ್ದು ದಿನಾಂಕ 26 ರಂದು ಬೆಳಿಗ್ಗೆ 8 ಕ್ಕೆ ಜರುಗಲಿದೆ. ನಂತರ ಅಗ್ನಿಕುಂಡ ಹಾಗೂ ಅನ್ನ ಸಂತರ್ಪಣೆ ನಡೆಯಲಿದೆ.


|| ಶ್ರೀ ಶಿವನಾರದಮುನಿ ಪ್ರಸನ್ನ ||

### 3ನೇ ವರ್ಷದ ಪುಣ್ಯಸ್ಮರಣೆ



### ದಿ|| ಸಾವಕ್ಕರ ಶ್ರೀಮತಿ ಬಸಮ್ಮನವರು

(ದಿ|| ಶ್ರೀ ಸಾವಕ್ಕರ ಕೊಟ್ರಪ್ಪನವರ ಧರ್ಮಪತ್ನಿ)

ಪೂಜ್ಯರೇ,
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷವಾಯಿತು. ನಿಮ್ಮ ಆದರ್ಶಗಳೇ ನಮಗೆ ದಾರಿದೀಪ. ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತ ಸದಾ ನಿಮ್ಮ ಸ್ಮರಣೆಯಲ್ಲಿರುವ

* ಶ್ರೀಮತಿ ಸಾವಕ್ಕ ನಿರ್ಮಲಾ ಮತ್ತು ಶ್ರೀ ಎಸ್.ಬಸವರಾಜಪ್ಪ ಶಾಮನೂರು
* ಶ್ರೀಮತಿ ಸಾವಕ್ಕ ಶಶಿಕಲಾ ಮತ್ತು ಶ್ರೀ ಎಸ್ ಎಸ್.ಸಿದ್ದಪ್ಪ ಮತ್ತು ಮಕ್ಕಳು
* ಶ್ರೀಮತಿ ನಾರಮ್ಮ ಲೇ|| ಬಸವರಾಜಪ್ಪ ಆನೆಕೊಂಡ (ಮಗಳು)
* ಶ್ರೀಮತಿ ಸಾವಕ್ಕ ಭಾರತಿ ಮತ್ತು ಶ್ರೀ ಲಂಗರಾಜು ಮತ್ತು ಮಕ್ಕಳು
* ಸಾವಕ್ಕ ವಂಶಸ್ಥರು ಶಾಮನೂರು
* ಬೆನ್ನೂರು ವಂಶಸ್ಥರು ಆನೆಕೊಂಡ ಮತ್ತು ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು ವರ್ಗ, ಶಾಮನೂರು






www.sparshhospital.com

SPARSH HOSPITAL
THE TOUCH OF LIFE

### ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕ್

ಲಿವರ್ ಮತ್ತು ಮೇದೋಜ್ಜೀರಕ ಗ್ರಂಥಿಯ ಶಸ್ತ್ರಚಿಕಿತ್ಸಕ

**ಡಾ. ಗೌತಮ್ ಕುಮಾರ್**
Liver and Pancreas Surgeon

* ಗ್ಯಾಸ್ ಟ್ರಬಲ್ , ಎದೆ ಉರಿ, ಹುಳಿತೇಗು
* ಹೊಟ್ಟೆ ಉರಿ, ಹೊಟ್ಟೆ ನೋವು, ಅಜೀರ್ಣ
* ಊಟ ಸೇರದಿರುವುದು, ಬಿಕ್ಕಳಿಕೆ
* ಆಗಾಗ ವಾಂತಿ ಆಗುವಿಕೆ, ಭೇದಿ
* ಮಲಬದ್ಧತೆ
* ಊಟಮಾಡುವಾಗ ನೀರು ಕುಡಿಯಲು ಕಷ್ಟವಾಗುವಿಕೆ
* ಹೊಟ್ಟೆ ಯಾವಾಗಲೂ ಉಬ್ಬರಿಸಿದ ಹಾಗೆ ಇರುವಿಕೆ
* ಜಾಂಡೀಸ್, ಲಿವರ್ ಖಾಯಿಲೆ
* ಬಹಳ ದಿನಗಳಿಂದ ಇರುವ ಭೇದಿ , ರಕ್ತಭೇದಿ

ನೋಂದಣಿಗಾಗಿ ಕರೆಮಾಡಿ: **9980033277**

ದಿನಾಂಕ: ಶುಕ್ರವಾರ 26 ಆಗಸ್ಟ್ 2022

ಸಮಯ: ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 1:00 ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್,
ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ಸೂಚನೆ: ವೈದ್ಯರು ಪ್ರತೀ ತಿಂಗಳ 4ನೇ ಶುಕ್ರವಾರದಂದು ತಪಾಸಣೆಗೆ ಲಭ್ಯರಿರುತ್ತಾರೆ






NEXA




## ಸರ್ವರಿಗೂ ಸುಸ್ವಾಗತ

### ಶೃತಿ ಮೋಟಾರ್ಸ್ ನೆಕ್ಸಾ ಉದ್ಘಾಟನಾ ಸಮಾರಂಭ

25ನೇ ಆಗಸ್ಟ್ 2022, | ಸಮಯ ಬೆಳಗ್ಗೆ: 12:30 ಕ್ಕೆ

ಸ್ಥಳ: ಪಿ.ಬಿ.ರಸ್ತೆ, ಅವರಗೆರೆ, ದಾವಣಗೆರೆ 577003.

ತಮ್ಮ ಆಗಮನಾಭಿಲಾಷಿಗಳು,
ಶೃತಿ ಮೋಟಾರ್ಸ್ ಮಾಲೀಕರು ಮತ್ತು ಸಿಬ್ಬಂದಿವರ್ಗ

ಸಂಪರ್ಕಿಸಿ: 080 45128553


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte